EMAIL : dairyadadaari@gmail.com ಸಂಪುಟ: 01 ಸಂಚಿಕೆ: 80
ನಿಮ್ಮ ನಂಬಿಕೆಯ ಧ್ವನಿ
# ಧೈರ್ಯದ ದಾರಿ
DAIRYADA DAARI NEWS PAPER
ಬೆಲೆ ರೂ : 2.00
ರಾಯಚೂರು
ಪುಟ: 4
ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ
Cell : 6360866626, 9036887793
KANNADA DAILY NEWS PAPER
ಕನ್ನಡ ದಿನಪತ್ರಿಕೆ
DAIRYADA DAARI
RNI NO: KNKAN/25/A2795 ಮಂಗಳವಾರ: 03-03-2026

**SEHRI & IFTARI TIME**
DAY TUESDAY
RAMZAN : 13
DATE: 03.03.2026
END TIME OF SEHRI :5:23 AM
FAJAR AZAAN : 5:27 AM


IFTAR TIME : 6:31 PM



ಸೈಯದ್ ಅಹ್ಮದ್ ಹುಸೇನಿ ಮತ್ ವಾಲೆ
ಕಾರ್ಯದರ್ಶಿಗಳು : ಮತ್ ವಾಲೆ ಸಾಹೇಬ್ ಪಬ್ಲಿಕ್ ಸ್ಕೂಲ್ ಮಾನ್ವಿ
ಸಂಪಾದಕರು : ಧೈರ್ಯದ ದಾರಿ ಕನ್ನಡ ದಿನಪತ್ರಿಕೆ

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
6360866626

## ಕನ್ನಡಿಗರ ರಕ್ಷಣೆಗೆ ಕ್ರಮ:ಖರ್ಚು ವೆಚ್ಚ ಭರಿಸಲು ನಿರ್ಧಾರ



**ಬೆಂಗಳೂರು: ಮಾ. 2:** ಇರಾನ್– ಇಸ್ರೇಲ್ ಯುದ್ಧದಿಂದಾಗಿ ಮಧ್ಯ ಪ್ರಾಚ್ಯದಲ್ಲಿ ಸಿಲುಕಿರುವ ಕರ್ನಾಟಕದವರ ರಕ್ಷಣೆಗೆ ರಾಜ್ಯ ಸರ್ಕಾರ ಕ್ರಮವಹಿಸಿದೆ ಜೊತೆಗೆ ಅವರು ವಾಪಸ್ ಬರುವವರೆಗೂ ಖರ್ಚು ವೆಚ್ಚಗಳನ್ನು ಸರ್ಕಾರ ಭರಿಸಲಿದೆ ಎಂದು ಕಂದಾಯ ಹಾಗೂ ವಿಪತ್ತು ನಿರ್ವಹಣಾ ಸಚಿವ ಕೃಷ್ಣ ಭೈರೇಗೌಡ ತಿಳಿಸಿದರು.ವಿಧಾನಸೌಧದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಯಾರು ಆತಂಕವಾಗೋದು ಬೇಡ. ರಾಜ್ಯ ಸರ್ಕಾರ ಕೇಂದ್ರ ವಿದೇಶಾಂಗ ಇಲಾಖೆ ಜೊತೆ ಸಂಪರ್ಕದಲ್ಲಿದೆ. ಎಲ್ಲರ ರಕ್ಷಣೆಗೂ ಕ್ರಮ ತೆಗೆದುಕೊಳ್ಳಲಿದೆ ಎಂದರು.

ಏರ್ ಪೋರ್ಟ್ ನಲ್ಲಿ ಸಿಲುಕಿರೋರು ವೀಸಾ ಸಮಸ್ಯೆ ಇದ್ದರೆ ಸ್ಥಳೀಯ ರಾಯಭಾರಿ ಕಚೇರಿಗೆ ಅಥವಾ ನಮಗೆ ಕರೆ ಮಾಡಿದ್ರೆ ವೀಸಾ ವ್ಯವಸ್ಥೆ ಮಾಡಲಾಗುತ್ತದೆ ಅಂತ ತಿಳಿಸಿದರು. ರಾಜ್ಯದವರು ವಾಪಸ್ ಬರೋವರೆಗೂ ಅಲ್ಲಿ ಆಗೋ ಖರ್ಚು ವೆಚ್ಚಗಳನ್ನ ರಾಜ್ಯ ಸರ್ಕಾರವೇ ಭರಿಸಲಿದೆ. ಇದನ್ನ ನಾವು ಕೇಂದ್ರ ಸರ್ಕಾರದ ಮೂಲಕ ಮಾಡಬೇಕು. ಕೇಂದ್ರ ಸರ್ಕಾರ ಹಣವನ್ನ ಭರಿಸಿ ನಮಗೆ ಮಾಹಿತಿ ಕೊಟ್ಟರೆ ರಾಜ್ಯ ಸರ್ಕಾರ ಸಂಪೂರ್ಣವಾಗಿ ಹಣವನ್ನ ಭರಿಸಲಿದೆ ಎಂದು ಸ್ಪಷ್ಟಪಡಿಸಿದರು.

ನಿನ್ನೆ ಕೇಂದ್ರ ಸರ್ಕಾರದ ಕ್ಯಾಬಿನೆಟ್ ಸಬ್ ಕಮಿಟಿ ಸಭೆ ಮಾಡಿದೆ. ಆದರೆ ಯಾವುದೇ ಮಾಹಿತಿ ಕೊಟ್ಟಿಲ್ಲ. ಯುದ್ಧ ಇನ್ನು ಒಂದು ವಾರ ಮುಂದುವರೆಯುವ ಮಾಹಿತಿ ಇದೆ. ಹೀಗಾಗಿ ಯಾರು ಆತಂಕಕ್ಕೆ ಒಳಗಾಗೋದು ಬೇಡ. ರಾಜ್ಯ ಸರ್ಕಾರ ಸಂಪೂರ್ಣ ಸಹಕಾರ ಕೊಡಲಿದೆ. ಅಲ್ಲಿವರೆಗೂ ಎಲ್ಲರು ಶಾಂತಿಯಿಂದ ಇರಬೇಕು ಎಂದು ಮನವಿ ಮಾಡಿದರು.

ಮಧ್ಯಪ್ರಾಚ್ಯ ಭಾಗದಲ್ಲಿ ಕೆಲಸ ಮಾಡುತ್ತಿರುವ ಕನ್ನಡಿಗರು ಸ್ಥಳೀಯ ರಾಯಭಾರಿ ಕಚೇರಿಯಲ್ಲಿ ನೋಂದಣಿ ಮಾಡಿಸಿಕೊಂಡು ಸ್ಥಳೀಯ ಆಡಳಿತ ಕೊಡುವ ನಿಯಮ ಪಾಲನೆ ಮಾಡಬೇಕು ಎಂದು ತಿಳಿಸಿದರು. ಶನಿವಾರದಿಂದಲೇ ಸಹಾಯವಾಣಿ ಪ್ರಾರಂಭ ಮಾಡಲಾಗಿದೆ. ಈವರೆಗೂ 109 ಜನ ಸಹಾಯವಾಣಿಗೆ ಕರೆ ಮಾಡಿದ್ದಾರೆ.ಈಗಾಗಲೇ ವಿದೇಶಾಂಗ ಇಲಾಖೆ ಮತ್ತು ದೆಹಲಿಯಲ್ಲಿರೋ ನಮ್ಮ ರೆಸಿಡೆಂಟ್ ಕಮೀಷನರ್ ಕೂಡ ಕೇಂದ್ರದ ಜೊತೆ ಸಂಪರ್ಕದಲ್ಲಿ ಇದ್ದಾರೆ ಎಂದು ಅವರು ಮಧ್ಯಪ್ರಾಚ್ಯದಲ್ಲಿ ಸಿಲುಕಿರುವವರಿಗೆ 3 ವಿಷಯಗಳ ಬಗ್ಗೆ ಆತಂಕ ಇದೆ. ನಮ್ಮನ್ನು ಹೇಗೆ ವಾಪಸ್ ಕರೆಸುತ್ತೀರಾ ವಿಶೇಷ ವಿಮಾನದ ಮೂಲಕನಾ ಹೇಗೆ ಅಂತ. ನಾವು ಕೇಂದ್ರದ ಜೊತೆ ಮಾತಾಡ್ತಾ ಇದ್ದೇವೆ.

ಸದ್ಯ ಈಗ ಏರ್ ಟ್ರಾಫಿಕ್ ನಿಷೇಧ ಆಗಿದೆ. ಏರ್ ಟ್ರಾಫಿಕ್ ಕ್ಲಿಯರ್ ಆದ ಕೂಡಲೇ ಕೇಂದ್ರ ಸರ್ಕಾರ ಹೇಗೆ ಕರೆಸಿಕೊಳ್ಳುತ್ತದೆ ನಮಗೆ ಮಾಹಿತಿ ಸಿಗುತ್ತದೆ. ವಾಯು ಸಂಚಾರ ನಿಯಂತ್ರಣಕ್ಕೆ ಬರುವತನಕ ತೆರವು ಕೆಲಸ ಆಗೊಲ್ಲ. ಹೀಗಾಗಿ ಎಲ್ಲರೂ ಶಾಂತವಾಗಿ ಇರಬೇಕು ಎಂದು ಮನವಿ ಮಾಡಿದರು. ಕದನ ವಿರಾಮ ಆದ ಕೂಡಲೇ ವಾಪಸ್ ಕರೆಸಲು ಕ್ರಮ ಆಗುತ್ತದೆ ಎಂದರು ಯುಎಇ (ದುಬೈ) ಮತ್ತು ಬಹ್ರೇನ್‌ನಲ್ಲಿ ಕನ್ನಡಿಗರು ಸಿಲುಕಿರುವ ಬಗ್ಗೆ ಮಾಹಿತಿ ಲಭ್ಯವಾಗಿದ್ದು, ಒಟ್ಟು 109 ಕನ್ನಡಿಗರ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ ಎಂದು ತಿಳಿಸಿದ್ದಾರೆ.

**ಜಿಲ್ಲಾವಾರು ಸಿಲುಕಿರುವವರ ವಿವರ:**ಸರ್ಕಾರ ಬಿಡುಗಡೆ ಮಾಡಿರುವ ಮಾಹಿತಿಯಂತೆ, ಯುಎಇ (ದುಬೈ) ನಲ್ಲಿ 100 ಮಂದಿ ಹಾಗೂ ಬಹ್ರೇನ್‌ನಲ್ಲಿ 9 ಮಂದಿ ಕನ್ನಡಿಗರು ನೆರವಿಗಾಗಿ ಕಾಯುತ್ತಿದ್ದಾರೆ.

**ಯುಎಇ (ದುಬೈ) ಪಟ್ಟಿ:**
ಬಳ್ಳಾರಿ: 32 ಬೆಂಗಳೂರು: 25 ದಾವಣಗೆರೆ: 9 ಚಿಕ್ಕಮಗಳೂರು: 5 ಕೊಡಗು, ವಿಜಯಪುರ: ತಲಾ 4 ದಕ್ಷಿಣ ಕನ್ನಡ, ಶಿವಮೊಗ್ಗ, ರಾಯಚೂರು: ತಲಾ 3 ಚಿಕ್ಕಬಳ್ಳಾಪುರ, ಚಿತ್ರದುರ್ಗ, ಕಲಬುರಗಿ, ಉಡುಪಿ: ತಲಾ 2 ತುಮಕೂರು: 1 ಜಿಲ್ಲೆ ಸ್ಪಷ್ಟವಿಲ್ಲದವರು: 3 **ಬಹ್ರೇನ್ ಪಟ್ಟಿ:** ಹಾಸನ: 4 ಉಡುಪಿ: 3 ಕೊಡಗು: 1 ಜಿಲ್ಲೆ ತಿಳಿಯದವರು: 1

## ಆಯುಷ್ಮಾನ್ ಭಾರತ್ ಯೋಜನೆಯಡಿ ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಸೌಲಭ್ಯ: ಡಾ.ಸುರೇಂದ್ರ ಬಾಬು

ಧೈರ್ಯದ ದಾರಿ

**ರಾಯಚೂರು ಮಾ,2–** ಕಡು ಬಡವರು, ಆರ್ಥಿಕ ದುರ್ಬಲ ವರ್ಗದವರು, ದೈನಂದಿನ ದುಡಿಮೆಯಿಂದಲೇ ಜೀವನ ನಿರ್ವಹಣೆ ಮಾಡಬೇಕಾದ ಕುಟುಂಬಗಳು ತುರ್ತು ಶಸ್ತ್ರಚಿಕಿತ್ಸೆಗಾಗಿ ಗುಣಮಟ್ಟದ ಆರೋಗ್ಯ ಚಿಕಿತ್ಸೆಯನ್ನು ಪಡೆಯಲು ಸಹಾಯಕವಾಗುವಂತೆ ಭಾರತ ಸರಕಾರ ಹಾಗೂ ಕರ್ನಾಟಕ ಸರಕಾರ ಜಂಟಿಯಾಗಿ ಒಟ್ಟು 1650 ವಿವಿಧ ಚಿಕಿತ್ಸಾ ವಿಧಾನಗಳಿಗೆ ಉಚಿತ ಚಿಕಿತ್ಸೆಯನ್ನು ಆಯುಷ್ಮಾನ್ ಭಾರತ– ಪ್ರಧಾನಮಂತ್ರಿ ಜನಾರೋಗ್ಯ ಯೋಜನಾ– ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ (ಎಬಿ–ಪಿಎಮ್ಜೆವೈ–ಸಿಎಮ್–ಆರ್ಕೆ) ಯೋಜನೆಯಡಿ ಫಲಾನುಭವಿಗಳಿಗೆ ಉಚಿತ ಚಿಕಿತ್ಸೆಯನ್ನು ಒದಗಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆಯಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಸುರೇಂದ್ರ ಬಾಬು ಅವರು ಕೋರಿದ್ದಾರೆ.

ಹೃದಯ ಸಂಭಂದಿ, ಮೂತ್ರಪಿಂಡ, ಕಿಡ್ನಿ, ಕ್ಯಾನ್ಸ್, ಸುಟ್ಟಗಾಯಗಳು, ಗಂಭಿರ ಅಪಘಾತ, ಕಾಕ್ಲಿಯರ್ ಇಂಪ್ಲಾಂಟ್ ಅಳವಡಿಕೆ, ಮೊಣಕಾಲು, ಸೊಂಟದ ಬದಲಿ ಚಿಕಿತ್ಸೆಯು ಸೇರಿದಂತೆ ಗಂಭೀರ ಖಾಯಿಲೆಗಳಿಗೆ ಒಟ್ಟು 1650 ವಿವಿಧ ಚಿಕಿತ್ಸಾ ವಿಧಾನಗಳಿಗೆ ಜಿಲ್ಲೆಯ ಎಲ್ಲ ಸರಕಾರಿ ಆರೋಗ್ಯ ಕೇಂದ್ರಗಳಲ್ಲಿ ಸೇವೆ, ಚಿಕಿತ್ಸೆಯನ್ನು ನೀಡಲಾಗುತ್ತಿದೆ. ಸರಕಾರದೊಂದಿಗೆ ಒಡಂಬಡಿಕೆ ಮಾಡಿಕೊಂಡ ನೋಂದಾಯಿತ ಖಾಸಗಿ ಆಸ್ಪತ್ರೆಗಳ ಮೂಲಕ ಫಲಾನುಭವಿಗಳಿಗೆ ಉಚಿತ ಚಿಕಿತ್ಸೆಯನ್ನು ಒದಗಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಇತ್ತೀಚೆಗೆ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ರಾಯಚೂರು ಲೋಕಸಭಾ ಕ್ಷೇತ್ರದ ಸಂಸದರಾದ ಜಿ. ಕುಮಾರ ನಾಯಕ ಅವರ ಅಧ್ಯಕ್ಷತೆಯ ನಡೆದ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದೀಶಾ) ಸಭೆಯಲ್ಲಿ ಸಂಸದರು ಸೂಚಿಸಿದಂತೆ ಈಗಾಗಲ್ಲೇ ಯೋಜನೆಯ ಕುರಿತು ಜನತೆಗೆ ಸಿಬ್ಬಂದಿಯವರ ಮೂಲಕ ಮಾಹಿತಿ ನೀಡಲಾಗುತ್ತಿದ್ದು, ಜಿಲ್ಲೆಯ ಪ್ರತಿ ನಾಗರಿಕರು ಯೋಜನೆಯಡಿ ಸೌಲಭ್ಯ ಪಡೆದು ಆರ್ಥಿಕ ಹೊರೆಯಿಂದ ಮುಕ್ತರಾಗಲು ಸದುಪಯೋಗಕ್ಕಾಗಿ ವಿನಂತಿಸಿದ್ದಾರೆ.



ಯೋಜನೆಯಡಿ ತಜ್ಞತೆಯ ಚಿಕಿತ್ಸಾ ಸೌಲಭ್ಯ: ತುರ್ತು ಸಂದರ್ಭಗಳಲ್ಲಿ 169 ಚಿಕಿತ್ಸಾ ವಿಧಾನ ಸೌಲಭ್ಯ, ಗಂಭೀರ ಆರೋಗ್ಯ ಸಮಸ್ಯೆಗಳಿಗೆ 900 ಚಿಕಿತ್ಸಾ ವಿಧಾನ ಸೌಲಭ್ಯ, ದ್ವಿತೀಯ ಹಂತದ 254 ಚಿಕಿತ್ಸಾ ವಿಧಾನಗಳು, ಪ್ರಾಥಮಿಕ ಹಂತದ 40 ಚಿಕಿತ್ಸಾ ವಿಧಾನ ಸೇರಿದಂತೆ ಒಟ್ಟು 1650 ವಿವಿಧ ಚಿಕಿತ್ಸಾ ವಿಧಾನಗಳನ್ನು ಉಚಿತವಾಗಿ ಒದಗಿಸಲಾಗುವುದು.

ಯೋಜನೆಯ ಫಲಾನುಭವಿಗಳು: ಬಿಪಿಎಲ್ ಕಾರ್ಡ್ ಹೊಂದಿದ ಕುಟುಂಬದ ಸದಸ್ಯರಿಗೆ ವಾರ್ಷಿಕ ರೂಪಾಯಿ 5 ಲಕ್ಷಗಳ ವರೆಗೆ ಉಚಿತ ಚಿಕಿತ್ಸಾ ವೆಚ್ಚ ಭರಿಸಲಾಗುವುದು. ಎಪಿಎಲ್ ಕಾರ್ಡ್ದಾರರಿಗೆ ವಾರ್ಷಿಕ ರೂಪಾಯಿ ಒಂದು ಲಕ್ಷ ಐವತ್ತು ಸಾವಿರಗಳ ವರೆಗೆ ಉಚಿತ ಚಿಕಿತ್ಸಾ ವೆಚ್ಚದ ಸೌಲಭ್ಯವಿದೆ.

ಆಸ್ಪತ್ರೆಗಳ ವಿವರ, ದೊರೆಯುವ ಸೌಲಭ್ಯ: ರಾಯಚೂರಿನ ನವೋದಯ ಆಸ್ಪತ್ರೆಯಲ್ಲಿ ಸಾಮಾನ್ಯ ಔಷಧಿ ಚಿಕಿತ್ಸೆ, ಸಾಮಾನ್ಯ ಶಸ್ತ್ರಚಿಕಿತ್ಸೆ, ಕಣ್ಣಿನ ತೊಂದರೆ, ಎಲುಬು ಕೀಲು, ಕಿವಿ ಮೂಗು ಗಂಟಲು ತಜ್ಞರು, ಪ್ರಸೂತಿ ತಜ್ಞತೆ, ಮೂತ್ರ ಪಿಂಡ ಕಾಯಿಲೆಗೆ ಚಿಕಿತ್ಸೆ ನೀಡಲಾಗುವುದು.




ಹೊಸಮನಿ ಆಸ್ಪತ್ರೆಯಲ್ಲಿ ಪ್ರಸೂತಿ ತಜ್ಞರು, ವಿಜಯ ಪಾಲಿ ಕ್ಲಿನಿಕ್ ಮತ್ತು ನರ್ಸಿಂಗ್ ಹೋಮ್‌ನಲ್ಲಿ ಹೃದಯ ರೋಗ ಚಿಕಿತ್ಸೆ, ಬೆಟ್ಟದೂರ ಆಸ್ಪತ್ರೆಯಲ್ಲಿ ಹೃದಯ ರೋಗ ಚಿಕಿತ್ಸೆ, ಧರಣಿ ಆಸ್ಪತ್ರೆಯಲ್ಲಿ ಹೃದಯ ರೋಗ ಚಿಕಿತ್ಸೆ, ಎಮ್.ಕೆ ಭಂಡಾರಿ ಆಸ್ಪತ್ರೆಯಲ್ಲಿ ಸಾಮಾನ್ಯ ಔಷಧಿ ಚಿಕಿತ್ಸೆ, ಸಾಮಾನ್ಯ ಶಸ್ತ್ರಚಿಕಿತ್ಸೆ, ಕಣ್ಣಿನ ತೊಂದರೆ, ಚಿಕಿತ್ಸೆ, ಎಲುಬು ಕೀಲು ತಜ್ಞತೆ, ಪ್ರಸೂತಿ ತಜ್ಞತೆ, ಕ್ಯಾನ್ಸರ್ ಚಿಕಿತ್ಸೆ, ಶಸ್ತ್ರ ಚಿಕಿತ್ಸೆ, ದಂತ ಚಿಕಿತ್ಸೆ, ಮೊಣಕಾಲು ಬದಲಿ/ಸೊಂಟ ಬದಲಿ ಶಸ್ತ್ರ ಚಿಕಿತ್ಸೆ ನಂದಿನಿ ಆಸ್ಪತ್ರೆಯಲ್ಲಿ ಸಾಮಾನ್ಯ ಶಸ್ತ್ರ ಚಿಕಿತ್ಸೆ ಸೌಲಭ್ಯ, ಎಲುಬು ಕೀಲು ತಜ್ಞತೆ, ಮೂತ್ರ ಪಿಂಡ ಕಾಯಿಲೆಗೆ ಚಿಕಿತ್ಸೆ ಹಾಗೂ ಮಾನ್ವಿಯ ಅಶ್ವಿನಿ ಆಸ್ಪತ್ರೆಯಲ್ಲಿ ಸಾಮಾನ್ಯ ಔಷಧಿ ಚಿಕಿತ್ಸೆ, ಸಾಮಾನ್ಯ ಶಸ್ತ್ರ ಚಿಕಿತ್ಸೆ, ಎಲುಬು ಕೀಲು ತಜ್ಞತೆ, ಸಿಂಧನೂರಿನ ಶ್ರೀ ರೇಣುಕಾ ಆಸ್ಪತ್ರೆಯಲ್ಲಿ ಸ್ತ್ರೀರೋಗ ತಜ್ಞತೆ, ಸಾಮಾನ್ಯ ಔಷಧಿ ಚಿಕಿತ್ಸೆ, ಸಾಮಾನ್ಯ ಶಸ್ತ್ರಚಿಕಿತ್ಸೆ ಸೌಲಭ್ಯ, ಎಲುಬು ಕೀಲು ತಜ್ಞತೆ, ಮೂತ್ರಪಿಂಡ ಕಾಯಿಲೆಗೆ ಚಿಕಿತ್ಸೆ, ಶಾಂತಿ ಆಸ್ಪತ್ರೆಯಲ್ಲಿ ಸಾಮಾನ್ಯ ಔಷಧಿ ಚಿಕಿತ್ಸೆ, ಸಾಮಾನ್ಯ ಶಸ್ತ್ರಚಿಕಿತ್ಸೆ ಸೌಲಭ್ಯ, ಎಲುಬು ಕೀಲು ತಜ್ಞತೆ, ಮೂತ್ರಪಿಂಡ ಕಾಯಿಲೆಗೆ ಚಿಕಿತ್ಸೆ, ಆದರ್ಶ ಆಸ್ಪತ್ರೆಯಲ್ಲಿ ಸ್ತ್ರೀ ರೋಗ ತಜ್ಞತೆ, ಸಾಮಾನ್ಯ ಔಷಧಿ ಚಿಕಿತ್ಸೆ, ಸಾಮಾನ್ಯ ಶಸ್ತ್ರಚಿಕಿತ್ಸೆ ಸೌಲಭ್ಯ, ಎಲುಬು ಕೀಲು ತಜ್ಞತೆ, ಕೇರ್ ಆಸ್ಪತ್ರೆಯಲ್ಲಿ ಸಾಮಾನ್ಯ ಔಷಧಿ ಚಿಕಿತ್ಸೆ, ಸಹನಾ ಆಸ್ಪತ್ರೆಯಲ್ಲಿ ಮಕ್ಕಳ ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆ, ವೀರ ಗಂಗಾಧರ ಆಸ್ಪತ್ರೆಯಲ್ಲಿ ಸ್ತ್ರೀರೋಗ ತಜ್ಞತೆ, ಸಾಮಾನ್ಯ ಔಷಧಿ ಚಿಕಿತ್ಸೆ, ಸಾಮಾನ್ಯ ಶಸ್ತ್ರ ಚಿಕಿತ್ಸೆ ಹಾಗೂ ಮಸ್ಕಿಯ ಅನ್ನಪೂರ್ಣ ಆಸ್ಪತ್ರೆಯಲ್ಲಿ ಎಲುಬು ಕೀಲು ಚಿಕಿತ್ಸೆ ಮಾಡಿಸಿಕೊಳ್ಳಬಹುದಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 10 ನೇತರಗತಿ ವಿದ್ಯಾರ್ಥಿಗಳಿಗಾಗಿ ವಿಶೇಷ ಬೇಸಿಗೆ ತರಬೇತಿ ಶಿಬಿರ: ಅರುಣಚಂದಾ



ಧೈರ್ಯದ ದಾರಿ

**ಮಾನ್ವಿ:** ಅಖಿಲ ಭಾರತ ವೀರಶೈವಲಿಂಗಾಯತ ಮಹಾಸಭಾ ತಾ.ಘಟಕ. ಹಾಗೂ ತಾಲೂಕು ವೀರಶೈವ ಲಿಂಗಾಯತ ಸಮಾಜದ ವತಿಯಿಂದ ಹಮ್ಮಿಕೊಳ್ಳಲಾದ 2 ನೇ ವರ್ಷದ ಬೇಸಿಗೆ ಶಿಬಿರವನ್ನು ಏ.5 ರಂದು ರಾಜ್ಯ ಸಚಿವರಾದ ಎನ್.ಎಸ್.ಬೋಸರಾಜು ಚಾಲನೆ ನೀಡಲಿದ್ದಾರೆ ಎಂದು ಅಖಿಲ ಭಾರತ ವೀರಶೈವಲಿಂಗಾಯತ ಮಹಾಸಭಾ ತಾಲೂಕು ಘಟಕದ ಅಧ್ಯಕ್ಷರಾದ ಅರುಣಚಂದಾ ತಿಳಿಸಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಮಾತನಾಡಿ ಕಲ್ಯಾಣ ಕರ್ನಾಟಕ ಭಾಗವು ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿರುವುದರಿಂದ ಈ ಭಾಗದ ವಿದ್ಯಾರ್ಥಿಗಳಿಗೆ ಹೆಚ್ಚಿನ ತರಬೇತಿಯ ಅವಶ್ಯಕತೆ ಇರುವುದರಿಂದ ತಾಲೂಕಿನ ಆಸಕ್ತ ಎಲ್ಲಾ ಸಮುದಾಯದ ಪಾಲಕರು ಕನ್ನಡ ಮತ್ತು ಅಂಗ್ಲ ಮಾಧ್ಯಮದಲ್ಲಿ 9 ನೇ ತರಗತಿಯಲ್ಲಿ ಉತ್ತೀರ್ಣರಾದ ತಮ್ಮ ಮಕ್ಕಳನ್ನು 10 ನೇ ತರಗತಿಯ ತರಬೇತಿಗೆ ಕಳುಹಿಸಿದಲ್ಲಿ ವಿಷಯವಾರು ಉಪನ್ಯಾಸಕರಿಂದ ಹಾಗೂ ಸಂಪನ್ಮೂಲ ವ್ಯಕ್ತಿಗಳಿಂದ 2 ತಿಂಗಳ ಕಾಲ 2ನೂರು ವಿದ್ಯಾರ್ಥಿಗಳಿಗೆ ಉಚಿತವಾಗಿ ಬೇಸಿಗೆ ತರಬೇತಿಯನ್ನು ನೀಡಲಾಗುವುದು ಹಾಗೂ ಅಗತ್ಯ ಪಠ್ಯವನ್ನು ಕೂಡ ಉಚಿತವಾಗಿ ನೀಡಲಾಗುವುದು. ಶಿಬಿರದಲ್ಲಿ ಪ್ರತಿದಿನ ವಿಶೇಷ ಉಪನ್ಯಾಸ ಹಾಗೂ ವಿವಿಧ ಮಠಗಳ ಶ್ರೀಗಳಿಂದ ಮಾರ್ಗದರ್ಶನವಿರುತ್ತದೆ. ಶಿಬಿರದಲ್ಲಿ ನೋಂದಾಯಿಸಿಕೊಳ್ಳುವವರು ಅಖಿಲ ಭಾರತ ವೀರಶೈವಲಿಂಗಾಯತ ಮಹಾಸಭಾ ಕಚೇರಿಯಲ್ಲಿ ಹಾಗೂ ಹೋಯ್ಸಳ ಏಂಟರ್‌ಪ್ರೈಸಸ್ ಅಂಗಡಿಯಲ್ಲಿ ಅರ್ಜಿಗಳನ್ನು ಸಲ್ಲಿಸಬಹುದು ಹೆಚ್ಚಿನ ಮಾಹಿತಿಗಾಗಿ ದೂ.ಸಂಖ್ಯೆ 9886211199, 88660450164, 9449337758,8797404409ಗೆ ಸಂಪರ್ಕಿಸಬಹುದು ಎಂದು ತಿಳಿಸಿದರು.

## ನೂತನ ಸ್ಕೌಟ್ ಗೈಡ್ ಭವನ ಉದ್ಘಾಟಿಸಿದ ಸಚಿವ ಬೋಸರಾಜು

ಧೈರ್ಯದ ದಾರಿ

**ರಾಯಚೂರು** : ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅನುದಾನದ ಅಡಿಯಲ್ಲಿ ನಿರ್ಮಿಸಲಾದ ನೂತನ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಕೇಂದ್ರದ ಉದ್ಘಾಟನೆ ಹಾಗೂ ಅಭಿನಂದನಾ ಸಮಾರಂಭವನ್ನು ಬಸವರಾಜ ಬೋರೆಡ್ಡಿ ಜಿಲ್ಲಾ ಮುಖ್ಯ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ ಆಯೋಜನೆ ಮಾಡಲಾಯಿತು, ಮೊದಲಿಗೆ ಧ್ವಜಾರೋಹಣ ನೆರವೇರಿಸಿ, ಎನ್.ಎಸ್ ಬೋಸರಾಜು, ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು ಜಿಲ್ಲಾ ಸಂಸ್ಥೆ ರಾಯಚೂರು ಇವರು ನೂತನ ಕಟ್ಟಡವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಅದರಲ್ಲೂ ಶಿಕ್ಷಣ ಇಲಾಖೆಗೆ ಸ್ಕೌಟ್ ಗೈಡ್ ಬೆಳವಣಿಗೆಗೆ ತಾವು ಸದಾ ಸಹಾಯ ಹಸ್ತ ನೀಡುವುದಾಗಿ ನುಡಿದರು. ಮುಖ್ಯ ಅತಿಥಿಗಳಾಗಿ ಸನ್ಮಾನ್ಯ ಡಾ. ಪಿ.ಜಿ.ಆರ್ ಸಿಂಧ್ಯ ರಾಜ್ಯ ಮುಖ್ಯ ಆಯುಕ್ತರು ಇವರು ಆಗಮಿಸಿದ್ದರು . ಅತಿಥಿಗಳಾಗಿ ರುದ್ರಪ್ಪ ಅಂಗಡಿ ಜಿಲ್ಲಾ ಸ್ಥಾನೀಕ ಆಯುಕ್ತರು, ಅಜೀಜಾ ಸುಲ್ತಾನ್ ನಿಕಟ ಪೂರ್ವ ಜಿಲ್ಲಾ ಮುಖ್ಯ ಆಯುಕ್ತರು, ಎಮ್. ಪ್ರಭಾಕರ್ ಭಟ್ SOC(S), ಮಲ್ಲೇಶ್ವರಿ ಜುಜಾರೆ ASOC/ರೆಂಜರಿಂಗ್ ವಿಭಾಗ/ಕಲ್ಯಾಣ ಕರ್ನಾಟಕ ಉಸ್ತುವಾರಿ ಹಾಗೂ ಎಲ್ಲ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಪದಾಧಿಕಾರಿಗಳು ಆಗಮಿಸಿದ್ದರು.ಜಿಲ್ಲಾ ಮುಖ್ಯ ಆಯುಕ್ತರು ಪ್ರಾಸ್ತಾವಿಕವಾಗಿ ಮಾತನಾಡಿದರು, ಗದ್ದಿ ಬಸಪ್ಪ ಜಿಲ್ಲಾ ಕಾರ್ಯದರ್ಶಿಗಳು ಇವರು ಎಲ್ಲರನ್ನೂ ಸ್ವಾಗತಿಸಿದರು.ಮಾನ್ಯ ಸಚಿವರು ದೀಪ ಬೆಳಗುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.



ತದನಂತರ ಜಿಲ್ಲಾ ಸಂಸ್ಥೆ ರಾಯಚೂರು ವತಿಯಿಂದ ಸನ್ಮಾನಿತರಿಗೆ ಗೌರವಪೂರ್ವಕವಾಗಿ ಸನ್ಮಾನ ಕಾರ್ಯಕ್ರಮವನ್ನು ಮಾಡಲಾಯಿತು.ಮಲ್ಲಿಕಾರ್ಜುನ ಹಲ್ಲೂರೆ ಜಿಲ್ಲಾ ಖಜಾಂಚಿಗಳು ಇವರು ಕಾರ್ಯಕ್ರಮವನ್ನು ನಿರೂಪಿಸಿದರು.

ಅಂಬಣ್ಣ ನಾಯಕ ಜಿಲ್ಲಾ ಸಂಘಟಕರು ಇವರು ಎಲ್ಲರಿಗೂ ವಂದಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಸಂಸ್ಥೆ ಉಪಾಧ್ಯಕ್ಷರು, ಪದಾಧಿಕಾರಿಗಳು, ಎಲ್ಲಾ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷರು, ಕಾರ್ಯದರ್ಶಿಗಳು, ಪದಾಧಿಕಾರಿಗಳು ಇದ್ದರು.

ಮೊದಲನೇ ಪುಟದಿಂದ

# 10 ನೇತರಗತಿ ವಿದ್ಯಾರ್ಥಿಗಳಿಗಾಗಿ ವಿಶೇಷ ಬೇಸಿಗೆ ತರಬೇತಿ ಶಿಬಿರ: ಅರುಣಚಂದಾ

ತಾಲೂಕು ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷರಾದ ಹರಿಹರಪಾಟೀಲ್, ಗೌ.ಅಧ್ಯಕ್ಷರಾದ ಶ್ರೀಧರಸ್ವಾಮಿ, ಪ್ರ.ಕಾರ್ಯದರ್ಶಿ ಜಗದೀಶ ಒತ್ತೂರ್, ತಾ.ಅಖಿಲ ಭಾರತ ವೀರಶೈವಲಿಂಗಾಯತ ಮಹಾಸಭಾ ರಾಜ್ಯ ಕಾರ್ಯಕಾರಣಿ ಸದಸ್ಯರಾದ ಸಿದ್ದಲಿಂಗಪ್ಪ ವಕೀಲರು.ಟಿ.ಎ.ಪಿ.,ಸಿ.ಎಂ.ಸಿ. ಅಧ್ಯಕ್ಷರಾದ ತಿಮ್ಮರೆಡ್ಡಿ ಭೋಗವತಿ, ಗಣೇಕಲ್ ಮಲ್ಲಯ್ಯ,ರೇವಣಸಿದ್ದಯ್ಯಸ್ವಾಮಿ, ಹೋಯ್ಸಳ ಸ್ವಾಮಿ,ಶಿವಕುಮಾರ ಪಾಟೀಲ್ ಭೋಗವತಿ. ಇದ್ದರು.

# ದ್ವಿತೀಯ ಪಿಯುಸಿ ಪರೀಕ್ಷೆ; 50 ವಿದ್ಯಾರ್ಥಿಗಳು ಗೈರು ಹಾಜರಿ

**ರಾಯಚೂರು ಮಾ,2** ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿಯಿಂದ 2026ರ ಮಾರ್ಚ್ 02ರ ಸೋಮವಾರ ದಂದು ನಡೆದ ದ್ವಿತೀಯ ಪಿಯುಸಿ-01ರ ಭೂಗೋಳ ಶಾಸ್ತ್ರ ಹಾಗೂ ಸಂಖ್ಯಾಶಾಸ್ತ್ರ ವಿಷಯದ ಪರೀಕ್ಷೆಯಲ್ಲಿ ಒಟ್ಟು 50 ವಿದ್ಯಾರ್ಥಿಗಳು ಗೈರು ಹಾಜರಿಯಾಗಿದ್ದಾರೆ.

ಜಿಲ್ಲೆಯ 43 ಪರೀಕ್ಷೆ ಕೇಂದ್ರಗಳಲ್ಲಿ ಭೂಗೋಳ ಶಾಸ್ತ್ರ ವಿಷಯದಲ್ಲಿ ಒಟ್ಟು 586 ನೋಂದಣೆಯಾಗಿದ್ದು, 557 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಿಯಾಗಿದ್ದಾರೆ. 29 ವಿದ್ಯಾರ್ಥಿಗಳು ಗೈರು ಹಾಜರಿಯಾಗಿದ್ದಾರೆ.

ಸಂಖ್ಯಾಶಾಸ್ತ್ರ ವಿಷಯದಲ್ಲಿ ಒಟ್ಟು 700 ನೋಂದಣೆಯಾಗಿದ್ದು, 679 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಿಯಾಗಿದ್ದಾರೆ. 21 ವಿದ್ಯಾರ್ಥಿಗಳು ಗೈರು ಹಾಜರಿಯಾಗಿದ್ದಾರೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಪ್ರಭಾರಿ ಉಪನಿರ್ದೇಶಕರಾದ ಸೋಮಶೇಖರಪ್ಪ ಹೋಕ್ರಾಣಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇಪಿಎಫ್ ಕಚೇರಿಯಿಂದ ಆರ್‌ಆರ್‌ಸಿ ಮೊತ್ತ ಪಾವತಿಸಲು ಸೂಚನೆ

**ರಾಯಚೂರು ಮಾ,2** ಉದ್ಯೋಗಿಗಳ ಭವಿಷ್ಯ ನಿಧಿ ಮತ್ತು ಇತರ ನಿಯಮಾವಳಿ ಕಾಯ್ದೆ, 1952 (ಇಪಿಎಫ್ & ಎಮ್‌ಪಿ ಕ್ಟ್ 1952) ರ ಸೆಕ್ಷನ್ 8 ಅಡಿಯಲ್ಲಿ ಜಾರಿ ಮಾಡಲಾದ ವಸೂಲಿ ಪ್ರಮಾಣ ಪತ್ರಗಳು (ಆರ್‌ಆರ್‌ಸಿಎಸ್) ವಿರುದ್ಧವಾಗಿ ಹೊರಡಿಸಲಾದ ಎಲ್ಲಾ ಸಂಸ್ಥೆಗಳು / ಉದ್ಯೋಗದಾತರಿಗೆ ತಿಳಿಸಲಾಗಿದೆ. ಆ ಪ್ರಮಾಣ ಪತ್ರಗಳಲ್ಲಿ ನಿರ್ದಿಷ್ಟಪಡಿಸಿದ ಬಾಕಿ ಮೊತ್ತವನ್ನು ವಸೂಲಿ ಪ್ರಕ್ರಿಯೆಗಳಿಗೆ ಅನುಗುಣವಾಗಿ ಅಳವಡಿಸಲಾದ ದ್ವಿತೀಯ ಮತ್ತು ತೃತೀಯ ಅನುಸೂಚಿಗಳ ಅನ್ವಯ ವಸೂಲಿ ಮಾಡಲಾಗುತ್ತದೆ.

ಎಲ್ಲಾ ಸಂಸ್ಥೆಗಳು ತಕ್ಷಣವೇ ಆರ್‌ಆರ್‌ಸಿ ಮೊತ್ತವನ್ನು ಸಂಪೂರ್ಣವಾಗಿ ಪಾವತಿಸಲು ಸೂಚನೆ ನೀಡಲಾಗಿದೆ. ಈ ಪ್ರಕಟಣೆ, ಯಾವುದೇ ನ್ಯಾಯಾಲಯ ಅಥವಾ ನ್ಯಾಯಮಂಡಳಿ ವಸೂಲಿ ಪ್ರಕ್ರಿಯೆಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಿರುವ ಮತ್ತು ಆ ತಾತ್ಕಾಲಿಕ ನಿಲುಗಡೆ ಪ್ರಸ್ತುತ ಜಾರಿಯಲ್ಲಿರುವ ಪ್ರಕರಣಗಳಿಗೆ ಅನ್ವಯಿಸುವುದಿಲ್ಲ ಎಂದು ವಸೂಲಿ ಅಧಿಕಾರಿ ಮತ್ತು ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರಾದ ನೀರಜ್ ಕುಮಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸದ್ಗುರು ಶ್ರೀ ವಿದ್ಯಾನಂದ ಶೂನ್ಯಶ್ರಮದಲ್ಲಿ ಎರಡನೇ ವರ್ಷದ ಸತ್ಸಂಗ ಸಂಜೀವಿನಿ ಕೂಟ



ಧೈರ್ಯದ ದಾರಿ

**ಮಾನ್ವಿ :** ತಾಲೂಕಿನ ನಕ್ಕುಂದಿ ಗ್ರಾಮದಲ್ಲಿನ ಸದ್ಗುರು ಶ್ರೀ ವಿದ್ಯಾನಂದ ಶೂನ್ಯಶ್ರಮದಲ್ಲಿ ನಡೆದ 2ನೇ ವರ್ಷದ ಸತ್ಸಂಗ ಸಂಜೀವಿನಿ ಕೂಟ ಕಾರ್ಯಕ್ರಮವನ್ನು ಕರೇಗುಡ್ಡ ಮಠದ ಶ್ರೀ ಮಹಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಆರ್ಶೀವಚನ ನೀಡಿ ಪ್ರತಿಯೋಬ್ಬರ ಜೀವನದಲ್ಲಿ ಪ್ರತಿಯೊಂದು ಹಂತದಲ್ಲಿಯು ಕೂಡ ಪರಮಾತ್ಮನ ಸಾನ್ನಿಧ್ಯವನ್ನು ಅರಿತಾಗ ಮಾತ್ರ ಜೀವನ ಸುದರವಾಗುತ್ತದೆ ಎನ್ನುವುದನ್ನು ನಾವು ಸತ್ಸಂಗಗಳ ಮೂಲಕ ತಿಳಿಯುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಶರಣರ ತಂದೆ ನೀನು ತಾಯಿ ನೀನು ವಚನದ ಕುರಿತು ಸುದ್ದಿಮೂಲ ದಿನಪತ್ರಿಕೆಯ ಹಿರಿಯ ಸಂಪಾದಕರಾದ ಬಸವರಾಜ ಸ್ವಾಮಿ ಉಪನ್ಯಾಸ ನೀಡಿ ನಮ್ಮ ನಾಡಿನಲ್ಲಿ 12 ನೇ ಶತಮಾನದಲ್ಲಿ ಬಸವಾದಿ ಶರಣರಿಂದ ಪ್ರಾರಂಭವಾದ ವಚನ ಪರಂಪರೆಯು ಇಂದಿಗೂ ಕೂಡ ಪ್ರಸ್ತುತವಾಗಿರುವುದಕ್ಕೆ ವಚನಗಳಲ್ಲಿ ಶರಣರ ಅನುಭವದ ನುಡಿಗಳೆ ಕಾರಣವಾಗಿದೆ ಶರಣರು ತಿಳಿಸಿದಂತೆ ಕಷ್ಟದ ಸಮಯದಲ್ಲಿ ದೇವರನ್ನು ಕರೆದಾಗ ಆತ ತಾಯಿಯಂತೆ ತಬ್ಬಿಕೊಂಡು ಸಂತೈಸುತ್ತಾನೆ , ನಾವು ತಪ್ಪಿದಾಗ ತಂದೆಯಂತೆ ತಿದ್ದುತ್ತಾನೆ. ಭಗವಂತ ದೂರದಲ್ಲಿರುವ ಶಕ್ತಿಯಲ್ಲ ನಮ್ಮೋಳಗಿರುವ ಚೈತನ್ಯವಾಗಿದ್ದು ಪ್ರತಿಯೊಬ್ಬರು ಕೂಡ ನಮ್ಮಲಿನ ಚೈತನ್ಯದ ಸ್ವರೂಪವನ್ನು ಅನುಭವಿಸುವುದನ್ನು ತಿಳಿಸಿಕೊಡುವುದೆ ಸತ್ಸಂಗ. ಇಂದಿನ ಸಮಾಜದಲ್ಲಿ ಕುಟುಂಬ ಮೌಲ್ಯಗಳು ಕುಸಿಯುತ್ತಿರುವ ಹಿನ್ನೆಲೆ ತಾಯಿ, ತಂದೆ, ಗುರುಗಳ ಮಾರ್ಗದರ್ಶನದಿಂದ ಧರ್ಮಾಚರಣೆಯ ಅಗತ್ಯವನ್ನು ನಾವು ತಿಳಿದುಕೊಳ್ಳಬೇಕಾಗಿದೆ ಎಂದು ತಿಳಿಸಿದರು.

ಬೆಳಿಗ್ಗೆ ಷಟಸ್ಥಲ ಧ್ವಜಾರೋಹಣವನ್ನು ಶ್ರೀ ನಾಗಾನಂದ ಶರಣರು ಶೂನ್ಯಶ್ರಮ ನೆರವೇರಿಸಿದರು. ದಿವ್ಯಸಾನಿಧ್ಯವನ್ನು ಬೆನಕನಹಳ್ಳಿ ದೇವಾನಂದ ಶರಣರು, ಶರಣ ಶ್ರೀ ಸ್ವತಂತ್ರ ಶರಣರು ಲಿಂಗಸ್ಗೂರು ವಹಿಸಿದರು.

ಕಾರ್ಯಕ್ರಮದಲ್ಲಿ ಮಲ್ಲನಗೌಡ ಪೋಲಿಸ್ ಪಾಟೀಲ್ ವಕೀಲರು, ನಕ್ಕುಂದಿ, ವಿ.ಎಸ್.ಎಸ್.ಎನ್. ಅಧ್ಯಕ್ಷರಾದ ಶರಣಪ್ಪ ಗೌಡ ಮಾಲಿ ಪಾಟೀಲ್ ನಕ್ಕುಂದಿ ಸೇರಿದಂತೆ ಇನ್ನಿತರರು ಇದ್ದರು.

## ಆರೋಗ್ಯ ವಿಚಾರಿಸಲು ಬಂದು 3.70 ಲಕ್ಷ ರೂ.ಮೌಲ್ಯದ ಚಿನ್ನ, ಬೆಳ್ಳಿ ಆಭರಣ ಕಳವು

**ಕಲಬುರಗಿ,ಮಾ.2**-ಆರೋಗ್ಯ ವಿಚಾರಿಸಲು ಬಂದು ಮನೆಯ ಅಲಮಾರಿಯಲ್ಲಿದ್ದ 3.70 ಲಕ್ಷ ರೂ.ಮೌಲ್ಯದ ಚಿನ್ನ ಮತ್ತು ಬೆಳ್ಳಿ ಆಭರಣ ಕಳವು ಮಾಡಲಾಗಿದೆ ಎಂದು ನಿವೃತ್ತ ಶಿಕ್ಷಕಿಯೊಬ್ಬರು ಇಲ್ಲಿನ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ.

ನಗರದ ನ್ಯೂ ಜೇವರ್ಗಿ ರಸ್ತೆಯ ಮಾಲು ಅಪಾರ್ಟ್ಮೆಂಟ್‌ನಲ್ಲಿ ವಾಸಿಸಿರುವ ನಿವೃತ್ತ ಶಿಕ್ಷಕಿ ಶಕುಂತಲಾ ಬಸವರಾಜ ಅಣವರಕರ್ ಅವರು ದೂರು ಸಲ್ಲಸಿದ್ದು, ಇವರು ಅನಾರೋಗ್ಯದಿಂದ ಬಳಲುತಿದ್ದಾಗ ಇವರ ಆರೋಗ್ಯ ವಿಚಾರಿಸಲೆಂದು ಘಾಟಗೆ ಲೇಔಟ್ ನಿವಾಸಿಯಾದ ನಿವೃತ್ತ ಶಿಕ್ಷಕಿ ಜಯಶ್ರೀ ಸೋಮರಾಯ ಹರವಾಳ ಮತ್ತು ಇವರ ಸಹೋದರಿಯ ಮಗಳು ಅಶೋಕ ನಗರದ ನವ್ಯಾ ತಂದೆ ಸುಭಾಶ್ಚಂದ್ರ ಕೋಳಕರ್ ಅವರು ಮನೆಗೆ ಹೋಗಿದ್ದಾರೆ. ಈ ವೇಳೆ ಶಕುಂತಲಾ ಅವರು ಚಹಾ ಮಾಡಲೆಂದು ಅಡುಗೆ ಮನೆಗೆ ಹೋದಾಗ ಅಲಮಾರಿಯಲ್ಲಿದ್ದ 1.28 ಲಕ್ಷ ರೂ.ಮೌಲ್ಯದ 40 ಗ್ರಾಂ.ಬಂಗಾರದ 4 ಬಿಲವಾರ, 1.37 ಲಕ್ಷ ರೂ.ಮೌಲ್ಯದ 43 ಗ್ರಾಂ.ಬಂಗಾರದ ತಾಳಿ, 80 ಸಾವಿರ ರೂ.ಮೌಲ್ಯದ 25 ಗ್ರಾಂ.ಬಂಗಾರದ ರೂಬಿ ಹರಳುಳ್ಳ ಲಾಕೆಟ್, 17 ಸಾವಿರ ರೂ.ಮೌಲ್ಯದ 5 ಗ್ರಾಂ.ಬಂಗಾರದ ಉಂಗುರ, 8 ಸಾವಿರ ರೂ.ಮೌಲ್ಯದ ಬೆಳ್ಳಿಯ ಲಕ್ಷ್ಮೀ ಮೂರ್ತಿ ಸೇರಿ 3.70 ಲಕ್ಷ ರೂ.ಮೌಲ್ಯದ ಬಂಗಾರ ಮತ್ತು ಬೆಳ್ಳಿ ಆಭರಣ ಕಳವಾಗಿವೆ ಎಂದು ತಿಳಿದುಬಂದಿದೆ.ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

## ರಾಯಚೂರು ಜಿಲ್ಲೆಯಲ್ಲೇ ಸಿರವಾರ ತಾಲ್ಲೂಕು ಉಳಿಸಲು ಸಂಪೂರ್ಣ ಸಹಕಾರ: ಸಚಿವ ಎನ್.ಎಸ್. ಬೋಸರಾಜು ಭರವಸೆ



ಧೈರ್ಯದ ದಾರಿ

**ಸಿರವಾರ:** "ಸಿರವಾರ ತಾಲ್ಲೂಕನ್ನು ರಾಯಚೂರು ಜಿಲ್ಲೆಯಲ್ಲಿಯೇ ಉಳಿಸಲು ನಿಮ್ಮೊಂದಿಗೆ ನಾನಿದ್ದೇನೆ. ಉದ್ದೇಶಿತ ಸಿಂಧನೂರು ಜಿಲ್ಲೆಗೆ ಸಿರವಾರ ಸೇರ್ಪಡೆಯಾಗಲಿದೆ ಎಂಬುದಕ್ಕೆ ಯಾವುದೇ ಅಧಿಕೃತ ಆಧಾರಗಳಿಲ್ಲ. ಒಂದು ವೇಳೆ ಅಂತಹ ಸಂದರ್ಭ ಎದುರಾದರೆ, ತಾಲ್ಲೂಕು ಉಳಿವಿಗಾಗಿ ನಾನು ನಿಮ್ಮ ಜೊತೆ ನಿಂತು ಸಂಪೂರ್ಣ ಸಹಕಾರ ನೀಡುತ್ತೇನೆ," ಎಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಭರವಸೆ ನೀಡಿದರು.

ಪಟ್ಟಣದಲ್ಲಿ ಭಾನುವಾರ ಸಿರವಾರ ತಾಲ್ಲೂಕು ಹೋರಾಟ ಸಮಿತಿ ಹಾಗೂ ವಿವಿಧ ಪಕ್ಷಗಳ ಮುಖಂಡರು ಸಿರವಾರವನ್ನು ರಾಯಚೂರು ಜಿಲ್ಲೆಯಲ್ಲಿಯೇ ಉಳಿಸುವಂತೆ ಒತ್ತಾಯಿಸಿ ಸಲ್ಲಿಸಿದ ಮನವಿ ಪತ್ರವನ್ನು ಸ್ವೀಕರಿಸಿ ಅವರು ಮಾತನಾಡಿದರು.

**ಸಚಿವರ ಪ್ರಮುಖ ಹೇಳಿಕೆಗಳು:**

**ಬಜೆಟ್‌ನಲ್ಲಿ ಪ್ರಸ್ತಾಪವಿಲ್ಲ:** ಪ್ರಸಕ್ತ ಬಜೆಟ್‌ನಲ್ಲಿ ಹೊಸ ಜಿಲ್ಲೆ ಘೋಷಣೆಯ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ.

ಜನರ ಅಭಿಪ್ರಾಯಕ್ಕೆ ಆದ್ಯತೆ: ಹೊಸ ಜಿಲ್ಲೆ ಘೋಷಣೆಯಾಗಬೇಕಾದರೆ ಸಮಿತಿ ರಚನೆಯಾಗಿ, ಸಾರ್ವಜನಿಕರ ಅನುಕೂಲ ಹಾಗೂ ಅಭಿಪ್ರಾಯಗಳನ್ನು ಪಡೆಯಬೇಕಾಗುತ್ತದೆ. ಜನರ ಆಶಯಕ್ಕೆ ವಿರುದ್ಧವಾಗಿ ಸಿರವಾರವನ್ನು ಹೊಸ ಜಿಲ್ಲೆಗೆ ಸೇರಿಸುವುದನ್ನು ನಾನೂ ಒಪ್ಪುವುದಿಲ್ಲ.

**ಹೋರಾಟಕ್ಕೆ ಬೆಂಬಲ:** "ಒಂದು ವೇಳೆ ಹೊಸ ಜಿಲ್ಲೆಗೆ ಸೇರ್ಪಡೆ ಮಾಡುವ ನಿರ್ಧಾರ ಕೈಗೊಂಡರೆ, ಸಿರವಾರವನ್ನು ರಾಯಚೂರಿನಲ್ಲಿಯೇ ಉಳಿಸಿಕೊಳ್ಳಲು ನೀವು ಮಾಡುವ ಹೋರಾಟಕ್ಕೆ ನಾನು ಮತ್ತು ಸ್ಥಳೀಯ ಶಾಸಕರು ಬೆಂಬಲವಾಗಿ ನಿಲ್ಲುತ್ತೇವೆ," ಎಂದು ಸ್ಪಷ್ಟಪಡಿಸಿದರು.

**ಉಪಸ್ಥಿತರಿದ್ದ ಮುಖಂಡರು:** ಈ ಸಂದರ್ಭದಲ್ಲಿ ತಾಲ್ಲೂಕು ಹೋರಾಟ ಸಮಿತಿ ಅಧ್ಯಕ್ಷ ಜೆ. ದೇವರಾಜಗೌಡ, ಮುಖಂಡರಾದ ಮಹಾಂತೇಶ ಪಾಟೀಲ ಅತ್ತನೂರು, ಜೆ. ಶರಣಪ್ಪಗೌಡ, ಚುಕ್ಕಿ ಸೂಗಪ್ಪ ಸಾಹುಕಾರ, ಅಯ್ಯನಗೌಡ ಏರಡ್ಡಿ, ಟಿ.ಆರ್. ಪಾಟೀಲ, ಜಿ. ಲೋಕರಡ್ಡಿ, ಬ್ರಿಜೇಶ ಪಾಟೀಲ ಹಾಗೂ ಪುರಸಭೆ ಅಧ್ಯಕ್ಷ ಹಾಜಿ ಚೌದ್ರಿ ಉಪಸ್ಥಿತರಿದ್ದರು. ಅಲ್ಲದೆ, ಕಲ್ಲೂರು ಬಸವರಾಜ ನಾಯಕ, ಚಂದ್ರಶೇಖರಯ್ಯ ಹಿರೇಮಠ, ರಮೇಶ ದರ್ಶನಕರ್, ಶಿವಶರಣ ಅರಕೇರಿ, ಅಬ್ರಾಮ್ ಹೊನ್ನಟ್ಟಿಗಿ, ಲಕ್ಷ್ಮಿಕಾಂತ, ಎಚ್.ಕೆ. ಶಿವಜ್ಞಾನಿ, ಹರಳಪ್ಪ ಯದ್ದಲದಿನ್ನಿ, ಬಡ್ಡಿ ಹನುಮಂತ, ಡಿ. ಜಯಪ್ಪ ಸೇರಿದಂತೆ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಪಕ್ಷದ ಕಾರ್ಯಕರ್ತರು ಹಾಜರಿದ್ದರು.

# ಕನ್ನಡ ಭಾಷೆಗೆ ಎಂದಿಗೂ ಸಾವಿಲ್ಲ: ಡಾ. ಅಮರೇಶಯತಗಲ್



**ಮಾನ್ವಿ:** ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವಕನ್ನಡ ಭಾಷೆಗೆ ಎಂದಿಗೂ ಸಾವಿಲ್ಲಎಂದುಡಾ. ಅಮರೇಶಯತಗಲ್, ನಿರ್ದೇಶಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರು ಅಭಿಪ್ರಾಯಪಟ್ಟರು. ಕನ್ನಡವು ಸಾವಿಲ್ಲದ ಭಾಷೆಯಾಗಿದ್ದು, ಅನೇಕ ಆತಂಕಗಳು ಮತ್ತು ಸವಾಲುಗಳ ನಡುವೆಯೂಅದು ಬದುಕಿ ಬೆಳೆಯುತ್ತಲೇ ಬಂದಿದೆ ಎಂದು ಶನಿವಾರ ಮಾನ್ವಿ ತಾಲ್ಲೂಕಿನ ನೀರಮಾನ್ವಿ ಗ್ರಾಮದ ಸಿದ್ಧಾರೂಢ ಮಠದ ಮೈದಾನದಲ್ಲಿಮಾನವಿ ತಾಲ್ಲೂಕುಕನ್ನಡ ಸಾಹಿತ್ಯ ಪರಿಷತ್ತುಹಮ್ಮಿಕೊಂಡಿದ್ದ 11ನೇ ತಾಲ್ಲೂಕು ಮಟ್ಟದಕನ್ನಡ ಸಾಹಿತ್ಯಸಮ್ಮೇಳನದ ಸಮಾರೋಪ ಭಾಷಣದಲ್ಲಿ ಮಾತನಾಡಿದರು.

ಪ್ರಾರಂಭದಲ್ಲಿ ಸಂಸ್ಕೃತ ಪ್ರಾಕೃತಭಾಷೆಗಳ ನಡುವಿನ ಸೆಣಸಾಟವನ್ನು ಎದುರಿಸಿದ ಕನ್ನಡ ಭಾಷೆಯು, ನಂತರ ಫ್ರೆಂಚ್, ಡಚ್ ಮತ್ತು ಮರಾಠಿ ಭಾಷೆಗಳ ಪ್ರಭಾವವನ್ನೂ ತಡೆದುಕೊಂಡಿದೆ.ಇಂದಿನ ಸಂದರ್ಭದಲ್ಲಿ ಇಂಗ್ಲಿಷ್, ಹಿಂದಿ ಹಾಗೂ ಅನ್ಯ ರಾಜ್ಯಗಳ ಭಾಷೆಗಳ ನಡುವೆ ನಲುಗುತ್ತಿದೆ ಯಾದರೂ ಕನ್ನಡವನ್ನು ಉಳಿಸಿ ಬೆಳೆಸುವ ಹೊಣೆಗಾರಿಕೆ ಕನ್ನಡಿಗರ ಕೈಯಲ್ಲಿದೆ ಎಂದು ಅವರು ಸ್ಪಷ್ಟಪಡಿಸಿದರು.

ಕನ್ನಡದ ಬೇರುಗಳು ಅತ್ಯಂತಆಳವಾಗಿವೆ. ಅದರ ರೆಂಬೆಕೊಂಬೆಗಳನ್ನು ಮಾತ್ರ ಕೆಲವರು ಕತ್ತರಿಸಬಹುದು, ಚಿವುಟಬಹುದು, ಆದರೆ ಅದು ಮತ್ತೆಮತ್ತೆಚಿಗುರುತ್ತದೆ ಹಾಗೂ ಬೆಳೆಯುತ್ತವೆ. ಆದ್ದರಿಂದ ಶಿಕ್ಷಣ, ಜ್ಞಾನ ಮತ್ತುಉದ್ಯೋಗದ ಭಾಷೆಯನ್ನಾಗಿ ಕನ್ನಡವನ್ನು ರೂಪಿಸಬೇಕಾಗಿದೆ. ಯಾವ ಭಾಷೆಅನ್ನವನ್ನು ನೀಡುತ್ತದೆಯೋ, ಜನರುಅದನ್ನು ನಂಬುತ್ತಾರೆ.ಹೀಗಾಗಿ ಅನ್ನವನ್ನು ನೀಡುವ ಭಾಷೆಗೆ ಪ್ರೋತ್ಸಾಹಿಸಬೇಕು.ಇಂದು ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಶಿಕ್ಷಣವನ್ನು ಕನ್ನಡದಲ್ಲಿ ನೀಡುವ ಪ್ರಯತ್ನಗಳು ಆಗಬೇಕು.ಕನ್ನಡದ ಎಲ್ಲಾ ಪ್ರಾಚೀನ ಮತ್ತು ಶಾಸ್ತ್ರೀಯ ಕೃತಿಗಳು ಉಚಿತವಾಗಿ ಲಭ್ಯವಾಗುವಆನ್‌ಲೈನ್ ಪೋರ್ಟಲ್ ಹಾಗೂ ಆ್ಯಪ್‌ಗಳನ್ನು ರೂಪಿಸಬೇಕು.ಸಾಹಿತ್ಯವು ಸಮಾಜಕ್ಕೆ ಸೂಕ್ತವಾದ ಮತ್ತು ಯೋಗ್ಯವಾದ ದಿಕ್ಕನ್ನುತೋರಿಸುವ ಶಕ್ತಿಯಾಗಿದೆ.ಹೀಗಾಗಿ ಪರಧರ್ಮ ಮತ್ತು ಪರವಿಚಾರಗಳ ಬಗ್ಗೆ ಕನ್ನಡಿಗರಲ್ಲಿರುವ ಸಹಿಷ್ಣುಗುಣವನ್ನು ಬೆಳೆಸಬೇಕಾಗಿದೆ.ಸರ್ವಜನಾಂಗದ ಶಾಂತಿಯ ತೋಟವಾಗಿ ಕನ್ನಡನಾಡು ಮತ್ತು ಕನ್ನಡ ಭಾಷೆ ನಳನಳಿಸಲಿ ಎನ್ನುವ ಆಶಯ ಸಾಹಿತ್ಯದ್ದಾಗಬೇಕು ಎಂದರು.

ಪ್ರಸ್ತುತ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಕಂಡುಬರುವಅನೈತಿಕ ನಡವಳಿಕೆಗಳ ವಿರುದ್ಧ ಸಾಹಿತ್ಯಗಟ್ಟಿಯಾಗಿ ಮಾತನಾಡಬೇಕು.ಸಮಾಜ, ಸಂಸ್ಕೃತಿ ಮತ್ತು ಪರಿಸರ ಅಧೋಗತಿಗಿಳಿಯುತ್ತಿದ್ದರೆ ಆಕುರಿತು ಜಾಗೃತಿ ಮೂಡಿಸುವ



ಹೊಣೆ ಸಾಹಿತ್ಯದ ಮೇಲಿದೆ. ಸಾಹಿತ್ಯವು ಜನರ ಧ್ವನಿಯಾಗಿ ನಿಲ್ಲಬೇಕು.ಪ್ರಭುತ್ವದ ಆಮಿಷಗಳಿಗೆ ಬಲಿಯಾಗದೆ ಸ್ವಾಯತ್ತತೆ'ಯನ್ನು ಕಾಪಾಡಿಕೊಳ್ಳಬೇಕು. ಸಂವಿಧಾನದ ಆಶಯಗಳನ್ನು ಸಾಹಿತ್ಯದ ಮೂಲಕ ಜನರಿಗೆತಲುಪಿಸುವ ಕಾರ್ಯವೂ ಅತ್ಯಗತ್ಯ. ಬದಲಾಗುತ್ತಿರುವ ಕೃತಕ ಜೀವನಶೈಲಿಯನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸುವ ಪ್ರಯತ್ನಗಳು ನಡೆಯಬೇಕಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಅಧ್ಯಯನಕ್ಕೊಳಗಾಗದ ಅಪಾರ ಮೌಖಿಕ ಸಾಹಿತ್ಯಅಡಗಿದ್ದು, ಅದನ್ನು ಸಂಗ್ರಹಿಸುವ, ವಿಶ್ಲೇಷಿಸುವ ಮತ್ತು ಪ್ರಕಟಿಸುವಕಾರ್ಯ ಕೈಗೊಳ್ಳಬೇಕಾಗಿದೆ.ಮೊಬೈಲ್ ಮತ್ತು ಇತರೆ ವ್ಯಸನಗಳಿಗೆ ಒಳಗಾಗುತ್ತಿರುವ ಯುವಜನತೆಗೆ ಪುಸ್ತಕ ಸಂಸ್ಕೃತಿ ಬೆಳೆಸುವ ಚಳುವಳಿ ಅತ್ಯಗತ್ಯವಾಗಿದೆ. ಕನ್ನಡ ಶಾಲೆಗಳನ್ನು ಉಳಿಸುವ,ದತ್ತು ತೆಗೆದುಕೊಳ್ಳುವ ದೊಡ್ಡ ಮಟ್ಟದ ಆಂದೋಲನಗಳು ರೂಪುಗೊಳ್ಳಬೇಕು.ಜೊತೆಗೆ ಕನ್ನಡವನ್ನು ಉಳಸುವುದು ತಮ್ಮಜವಾಬ್ದಾರಿ ಹಾಗೂ ಕರ್ತವ್ಯ ಎಂದು ಜನರಿಗೆ ಮನವರಿಕೆಯಾಗಬೇಕು. ಅಲ್ಲದೆ ಯಾವುದೇ ಫಲಾಪೇಕ್ಷೆಯಿಲ್ಲದೆ ಕಲೆ ಮತ್ತು ಸಾಹಿತ್ಯವನ್ನು ಸೃಷ್ಟಿಸುತ್ತಿರುವ ಜನಪದ ಕಲಾವಿದರನ್ನು ಗುರುತಿಸುವುದು ಹಾಗೂ ಪ್ರೋತ್ಸಾಹಿಸುವುದು ಸಮಾಜದ ಆದ್ಯಕರ್ತವ್ಯ. ಜೊತೆಜೊತೆಗೆ ಕನ್ನಡ ಭಾಷೆ ಮತ್ತು ಸಾಹಿತ್ಯದ ಉಳಿವು ಮತ್ತು ಬೆಳವಣಿಗೆಗೆ ಭಾವನಾತ್ಮಕವಾದ, ಕ್ರಿಯಾತ್ಮಕವಾದ ಚಳುವಳಿಗಳು ಅತ್ಯಗತ್ಯವೆಂದು ಹೇಳಿದರು. ಅಲ್ಲದೆ ಮಾನ್ವಿ ತಾಲ್ಲೂಕಿನ ಚರಿತ್ರೆ, ಸಂಸ್ಕೃತಿ ಮತ್ತು ಸಾಹಿತ್ಯ ಪರಂಪರೆಯ ವಿವಿಧ ಆಯಾಮಗಳನ್ನು ಅರುಹಿದರು.ನಮ್ಮ ಸ್ಮಾರಕಗಳು ಉಳಿದರೆ ಮಾತ್ರ ನ್ಮಮ ಸಂಸ್ಕೃತಿ ಉಳಿಯುತ್ತದೆ ಎಂದುಕರೆ ನೀಡಿದರು.

# ಯುದ್ಧ: ಗಡಿ ರೇಖೆಗಳಿಗಷ್ಟೇ ಸೀಮಿತವಿಲ್ಲ, ಜನರ ಬದುಕಿನ ಮೇಲಿನ ನೈಜ ಪರಿಣಾಮಗಳು

ಯುದ್ಧವು ಕೇವಲ ದೇಶಗಳ ನಡುವಿನ ಭೌಗೋಳಿಕ ಗಡಿಗಳನ್ನು ಮಾತ್ರ ಬದಲಾಯಿ ಸುವುದು ಅಲ್ಲ. ಇದು ಜನರ ಮನಸ್ಸು, ಭವಿಷ್ಯ, ಮಾನವೀಯತೆ, ಆರ್ಥಿಕತೆ ಮತ್ತು ಸಮಾಜದ ಸುತ್ತಲೂ ಇರುವ ಹೊಸ ನೆಲೆಗಳನ್ನು ಆಳವಾಗಿ ಹಾನಿಗೊಳಿಸುತ್ತದೆ. ಗಡಿಗಡಿ ದೇಶಗಳು ಹೊಡೆದಾಡಿದಾಗ, ಅದರ ಬೀಜಗಳು ಸಾಮಾನ್ಯ ನಾಗರಿಕರ ಜೀವನದಲ್ಲಿ ಫಲಿಸುತ್ತವೆ.

ಇತಿಹಾಸದ ನೋಟದಲ್ಲಿ, ಜಾಗತಿಕ ಮಟ್ಟದ ಮಹಾಯುದ್ಧಗಳು ಜಾಗತಿಕ ಮಾನವೀಯತೆಯ ಹಾಗೂ ಮುಗ್ದ ಜನರ ಸಾವಿಗೆ ಕಾರಣವಾದ ಇತಿಹಾಸ ನಮಗೆಲ್ಲ ತಿಳಿದಿದೆ. ಯಾವು ಯುದ್ಧವೂ ಗಡಿ ರೇಖೆಗಳಿಗೆ ಮಾತ್ರ ಸೀಮಿತವಾಗಿಲ್ಲ. World War I ಮತ್ತು World War II ಎಂಬ ಎರಡು ಮಹಾಯುದ್ಧಗಳು ಕೋಟ್ಯಂತರ ಜೀವಗಳನ್ನು ಕಸೀದುಕೊಂಡವು, ಅದರ ಪರಿಣಾಮಗಳು ಇಂದಿಗೂ ನಾವು ನೋಡಬಹುದು.

ಇತ್ತೀಚೆಗೆ, ಅಮೇರಿಕ ಮತ್ತು ಇರಾನ್ ನಡುವೆ ಉದ್ಭವಿಸಿರುವ ಯುದ್ದ–ಸಂಘರ್ಷ ಜಾಗತಿಕ ಗಮನ ಸೆಳೆದಿದೆ. 2026 ರ ಫೆಬ್ರವರಿ–ಮಾರ್ಚ್ ನಡುವೆ, ಯುನೈಟೆಡ್ ಸ್ಟೇಟ್ಸ್ ಮತ್ತು ಇಸ್ರೇಲ್ ಸೇನೆಯನ್ನು ಜೊತೆಯಾಗಿ ಇರಾನ್‌ನ ಮೇಲೆ ದಾಳಿಯನ್ನು ಪ್ರಾರಂಭಿಸಿದವು. ಅದರಲ್ಲೂ ಇರಾನ್‌ನ ಸರ್ವೋಚ್ಚ ನಾಯಕ ಅಯಾತೋಲ್ಲಾ ಅಲಿ ಖಾಮೇನೇಯಿ ಅವರ ಹತ್ಯೆ ಇರಾನ್ ಗೆ ಅಘಾತವನ್ನು ನೀಡಿದೆ.ಇದಕ್ಕೆ ಪ್ರತಿಯಾಗಿ, ಇರಾನ್ ಬಲವಾದ ಪ್ರತಿಕ್ರಿಯೆಯನ್ನು ಮಿಸ್ಸೈಲ್ ಹಾಗೂ ಡ್ರೋನ್ ದಾಳಿಗಳ ಮುಖಾಂತರ ಅಮೇರಿಕ ಮತ್ತು ಇಸ್ರೇಲ್ ಗೆ ನೀಡಿದೆ.

ಈ ಯುದ್ಧ–ಸ್ಥಿತಿಯ ಹಿನ್ನೆಲೆಯಲ್ಲಿ ಸಮುದ್ರ ಮಾರ್ಗವಾಗಿರುವ ಹಾರ್ಮೋಜ್ ಕಾಲುವೆಯಲ್ಲಿ ಸಾಗಣೆಗೆ ತಡೆಯನ್ನು ಒಡ್ಡಿದರೆ ಮಧ್ಯ ಪ್ರಾಚ್ಯಾ ದೇಶಗಳಿಂದ ಇತರೆ ದೇಶಗಳಿಗೆ ರಫ್ತುಗುವ ಕಚ್ಚ ತೈಲದ ವ್ಯಾಪಾರಕ್ಕೆ ಮತ್ತು ಇತರೆ ವ್ಯಾಪಾರ ಸಂಸ್ಥೆಗಳು ಆರ್ಥಿಕವಾಗಿ ನಲುಗಲಿವೆ.

ಯುದ್ಧದಿಂದ ಜಾಗತಿಕ ಶಕ್ತಿ ರಾಜಕೀಯದ ಬದಲಾಗುವಿಕೆ, ಇಂಧನ ಮಾರುಕಟ್ಟೆ ಬೆಲೆಗಳ ಏರಿಕೆ, ಮತ್ತು ಪಟ್ಟಣಗಳ ನಡುವೆ ಶಕ್ತಿ ವಿತರಣಾ ವ್ಯವಹಾರಗಳ ವ್ಯತ್ಯಯ ಕಂಡುಬರುತ್ತಿದೆ.

ಯುದ್ಧವು ಸೈನಿಕರನ್ನು ಮಾತ್ರ ಅಪಾಯಕ್ಕೆ ಒಳಮಾಡುವುದಿಲ್ಲ. ಅದು ಸಾಮಾನ್ಯ ನಾಗರಿಕರ ಜೀವನದ ಜೊತೆಯಲ್ಲೂ ಚೆಲ್ಲಾಟವಡುತ್ತದೆ ಮನೆಗಳು ಹಾಳಾಗಿ, ಮಕ್ಕಳು ಶಿಕ್ಷಣದಿಂದ ದೂರವಾಗಿ, ಆರೋಗ್ಯ ವ್ಯವಸ್ಥೆಗಳು ಕುಸಿದು ಹೋಗುತ್ತವೆ.
ಮಾನಸಿಕವಾಗಿ, ಅವರ ಮನಸ್ಸಿನಲ್ಲಿ ಭಯ ಮತ್ತು ದುಃಖದ ಗಾಢ ಹಾದಿಗಳನ್ನು ತೋರುವ ಸಂಭವವೂ ಇದೆ. ಯುದ್ಧದ ಪರಿಣಾಮವಾಗಿ, ದೇಶಗಳ ನಡುವೆ ನೋವು, ಧ್ವಂಸ ಮತ್ತು ಅನಿಶ್ಚಿತತೆಯೂ ತಲೆದೂರಬಹುದು.



ಈ ಸಂದರ್ಭದಲ್ಲಿ, ಶಾಂತಿಯೇ ಶ್ರೇಷ್ಠ ಆಯ್ಕೆ ಎಂದು ನಾವು ಅರ್ಥಮಾಡಿ ಕೊಳ್ಳಬೇಕು. ಸಂವಾದ, ಸಹನೆ ಮತ್ತು ಪರಸ್ಪರ ಗೌರವವೇ ಮಾನವನ ಭವಿಷ್ಯವನ್ನು ಕಟ್ಟಿಕೊಡುವುದು. ಯುದ್ಧವು ಕೇವಲ ಹೋರಾಟವಲ್ಲ; ಇದು ಹಾನಿಯ ಸಂಕೇತ. ಆದ್ದರಿಂದ, ಶಾಂತಿಯ ದಾರಿಯನ್ನು ಮಾತ್ರ ನಾವೆಲ್ಲರೂ ಆಯ್ಕೆ ಮಾಡಬೇಕು.



ಮಿರ್ಜಾ ಮಹಮ್ಮದ್ ಬೇಗ್

# ಡಿಕೆಶಿ ಬಣದ ಮೇಲೆ ಕಣ್ಣಿಡಲು ಗುಪ್ತಚರ ಇಲಾಖೆಗೆ ಸೂಚಿಸಿದ್ದಾರಾ ಸಿಎಂ..?

ಬೆಂಗಳೂರು,ಮಾ.2– ರಾಜ್ಯದ ಪ್ರತಿಯೊಂದು ಆಗುಹೋಗುಗಳು ಹಾಗೂ ಚಟುವಟಿಕೆಗಳ ಮೇಲೆ ಹದ್ದಿನ ಕಣ್ಣಿಡುವ ಗುಪ್ತಚರ ವಿಭಾಗ ದುರುಪಯೋಗವಾಗುತ್ತಿದೆಯೇ?! ಏಕೆಂದರೆ ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್‌ಮಾಡಿರುವ ಆರೋಪಕ್ಕೆ ಪುಷ್ಟಿ ನೀಡುವಂತಿದ್ದು, ಗುಪ್ತಚರ ವಿಭಾಗವು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಅವರ ಬಣದ ಚಲನವಲನಗಳ ಮೇಲೆ ಹದ್ದಿನ ಕಣ್ಣಿಡಲು ಸಿಎಂ ಸೂಚಿಸಿದ್ದಾರೆ ಎನ್ನಲಾಗುತ್ತಿದೆ.

ತಮ್ಮ ಎಕ್ಸ್ ಖಾತೆಯಲ್ಲಿ ಆರ್.ಅಶೋಕ್ ಅವರು, ಗುಪ್ತಚರ ವಿಭಾಗವನ್ನು ಮುಖ್ಯಮಂತ್ರಿ ಅವರೇ ತಮ್ಮ ಬಳಿ ಇಟ್ಟುಕೊಳ್ಳುತ್ತಾರೆ. ಕಾರಣ ರಾಜ್ಯದಲ್ಲಿ ನಡೆಯುವ ಪ್ರತಿಯೊಂದು ಚಟುವಟಿಕೆಗಳು ಸೇರಿದಂತೆ ಎಲ್ಲಾ ಮಾಹಿತಿಯನ್ನು ಕಲೆಹಾಕುವುದು ಸಾಮಾನ್ಯ.
ಗುಪ್ತಚರ ವಿಭಾಗಕ್ಕೆ ಓರ್ವ ಐಪಿಎಸ್ ದರ್ಜೆಯ ಎಡಿಜಿಪಿ ಅಧಿಕಾರಿಯನ್ನು ನೇಮಕ ಮಾಡಲಾಗುತ್ತದೆ. ಇದರ ಕೆಳಗೆ ವಿವಿಧ ಶ್ರೇಣಿಯ ಅಧಿಕಾರಿಗಳು ಇರುತ್ತಾರೆ.

ಈಗ ಅಶೋಕ್ ಅವರು ಮಾಡಿರುವ ಆರೋಪ ದಂತೆ ಮುಖ್ಯಮಂತ್ರಿ ಸಿದ್ದ ರಾಮಯ್ಯ ಅವರು ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಅವರ ಬಣದ ಶಾಸಕರ ಚಲನವಲನಗಳ ಮೇಲೆ ಹದ್ದಿನ ಕಣ್ಣಿಡಲು ಗುಪ್ತಚರ ವಿಭಾಗಕ್ಕೆ ನಿರ್ದೇಶನ ನೀಡಿದ್ದಾರೆಂದು ಆರೋಪಿಸಿದ್ದಾರೆ.
ಕೂಡಲೇ ಸಿದ್ದರಾಮಯ್ಯ ನವರು ಗುಪ್ತಚರ ವಿಭಾಗವನ್ನು ತಮ್ಮ ಸಹೋದ್ಯೋಗಿಗಳ ಮೇಲೆ ಕಣ್ಣಿಡುವ ಕೃತ್ಯ ನಡೆಸಬಾರದು ಎಂದು ಹೇಳಿದ್ದಾರೆ.

ಅಂದಹಾಗೆ ಅಶೋಕ್ ಅವರು ಮಾಡಿರುವ ಆರೋಪಕ್ಕೆ ಪುಷ್ಟಿ ನೀಡುವಂತೆ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಕೆಲವು ವಿದ್ಯಮಾನಗಳು ಕೂಡ ಅವರ ಆರೋಪವನ್ನು ತಳ್ಳಿ ಹಾಕುವಂತಿಲ್ಲ. ಏಕೆಂದರೆ ಸಿಎಂ ಕುರ್ಚಿ ಮೇಲೆ ಕಣ್ಣಿಟ್ಟಿರುವ ಡಿಕೆಶಿ ಮತ್ತವರ ಬಣದ ಶಾಸಕರು ಪ್ರತ್ಯೇಕವಾಗಿ ಸಭೆ ಸೇರುವುದು, ರಾಜಕೀಯ ಚಟುವಟಿಕೆಗಳ ಬಗ್ಗೆ ಸೇರಿದಂತೆ ಹಲವು ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸುತ್ತಲೇ ಇದ್ದಾರೆ.

ಅಶೋಕ್ ಹೇಳಿರುವಂತೆ ಗುಪ್ತಚರ ವಿಭಾಗವನ್ನು ತಮ್ಮ ಬಳಿ ಇಟ್ಟುಕೊಂಡಿರುವ ಸಿದ್ದರಾಮಯ್ಯ ಅವರು ತಮ್ಮ ರಾಜಕೀಯ ಎದುರಾಳಿಗಳ ಕಾರ್ಯತಂತ್ರ, ಚಟುವಟಿಕೆಗಳು ಸೇರಿದಂತೆ ಪ್ರತಿಯೊಂದು ಮಾಹಿತಿಯನ್ನು ಕಲೆ ಹಾಕಿ ದೈನಂದಿನ ವರದಿ ನೀಡುವಂತೆ ಸೂಚಿಸಿದ್ದಾರೆ ಎಂಬುದು ಅವರ ಆರೋಪವಾಗಿದೆ.

ಮಾಗಡಿ ಶಾಸಕ ಎಚ್.ಸಿ. ಬಾಲಕೃಷ್ಣ ಅವರ ಹುಟ್ಟುಹಬ್ಬದ ಮುನ್ನಾದಿನದಂದು ಡಿ.ಕೆ.ಶಿವಕುಮಾರ್ ಕ್ಯಾಂಪ್ ಹೋಟೆಲ್‌ನಲ್ಲಿ ಭೋಜನಕ್ಕೆ ಒಟ್ಟುಗೂಡಿದ ನಂತರ, ಸಿದ್ದರಾಮಯ್ಯ ಅವರು ಶಾಸಕರ ಚಲನವಲನಗಳ ಬಗ್ಗೆ ಸೂಕ್ಷ್ಮ ವಿವರಗಳನ್ನು ಕೋರಿದ್ದಾರೆ ಎಂದು ಮೂಲಗಳು ತಿಳಿಸಿವೆ.




ಡಿಕೆಎಸ್ ಶಿಬಿರವು ಸುಮಾರು 40 ಶಾಸಕರು ಭೋಜನಕೂಟದಲ್ಲಿ ಭಾಗವಹಿಸಿದ್ದಾರೆ ಎಂದು ಪರೋಕ್ಷವಾಗಿ ಹೇಳಿಕೊಂಡಿತ್ತು. ಆದರೆ ಭೋಜನಕೂಟಕ್ಕೆ ಆಹ್ವಾನಿಸಿದ್ದ 69 ಶಾಸಕರಲ್ಲಿ ಕೇವಲ 32 ಮಂದಿ ಮಾತ್ರ ಹಾಜರಾಗಿದ್ದರು. ಬಜೆಟ್ ಅಧಿವೇಶನದ ನಂತರ ದೆಹಲಿಯಲ್ಲಿ ಕಾಂಗ್ರೆಸ್ ಹೈಕಮಾಂಡ್ ಅನ್ನು ಭೇಟಿಯಾಗುವುದಾಗಿ ಶಾಸಕರ ತಂಡ ಸಂದೇಶ ಕಳುಹಿಸಿತ್ತು. ಎರಡೂ ಬಣಗಳಿಂದಲೂ ದೂರವಾಗಿ ತಟಸ್ಥರಾಗಿದ್ದ ಕೆಲವು ಶಾಸಕರು ಸಿಎಂ ಬದಲಾವಣೆಯ ಪರವಾಗಿದ್ದಾರೆ. ಆದರೆ 2028ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಇಮೇಜ್‌ಗೆ ಧಕ್ಕೆ ತರದಂತೆ ಮತ್ತು ಭವಿಷ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರದ ನಿರ್ಧಾರವನ್ನು ಪಕ್ಷದ ಹೈಕಮಾಂಡ್ ತೆಗೆದುಕೊಳ್ಳಬೇಕಿದೆ ಎಂದು ಕೆಲವು ಶಾಸಕರು ತಿಳಿಸಿದ್ದಾರೆ.

ಶಿವಕುಮಾರ್ ಮುಖ್ಯಮಂತ್ರಿ ಯಾದರೆ ಮುಂದೆ ಎದು ರಾಗುವ ಕಾನೂನು ತೊಡಕು ಗಳ ಬಗ್ಗೆ ಎಐಸಿಸಿ ಕಾನೂನು ಅಭಿಪ್ರಾಯ ಗಳನ್ನು ಸಂಗ್ರಹಿಸುತ್ತಿದೆ. ಅಕ್ರಮ ಆಸ್ತಿ ಪ್ರಕರಣ ಸೇರಿದಂತೆ ಶಿವಕುಮಾರ್ ವಿರುದ್ಧ ಬಾಕಿ ಇರುವ ಕೆಲವು ಪ್ರಕರಣಗಳನ್ನು ನಿರ್ವಹಿಸು ತ್ತಿರುವ ಸುಪ್ರಿಂಕೋರ್ಟ್ ವಕೀಲ ಕಪಿಲ್ ಸಿಬಲ್ ಶೀಘ್ರವೇ ಎಐಸಿಸಿಗೆ ಮಾಹಿತಿ ನೀಡಲಿದ್ದಾರೆ ಎಂದು ತಿಳಿದುಬಂದಿದೆ.

ಅಕ್ರಮ ಆಸ್ತಿ ಸಂಪಾದನೆ ಪ್ರಕರಣದಲ್ಲಿ ಜೈಲುವಾಸದಿಂದ ಹೊರಬಂದಿರುವ ಶಿವಕುಮಾರ್ ಪ್ರಕರಣವನ್ನು ಬಿಜೆಪಿ ಅಸವಾಗಿರಿಸಿಕೊಳ್ಳುತ್ತದೆ ಎಂಬ ಭಯ ಕಾಂಗ್ರೆಸ್‌ಗೆ ಕಾಡುತ್ತಿದೆ. ಹೀಗಾಗಿ ಕಾಂಗ್ರೆಸ್ ಹೈಕಮಾಂಡ್ ಎಚ್ಚರಿಕೆಯ ಹೆಜ್ಜೆ ಇಡಲಿದೆ. 2024 ರ ಮಾರ್ಚ್‌ನಲ್ಲಿ ಸುಪ್ರಿಂಕೋರ್ಟ್ ಅವರ ವಿರುದ್ಧದ 2018 ರ ಹಣ ವರ್ಗಾವಣೆ ಪ್ರಕರಣವನ್ನು ವಜಾಗೊಳಿಸಿತು. ಇದು ಶಿವಕುಮಾರ್ ಬಣದಲ್ಲಿ ನೈತಿಕತೆಯನ್ನು ಹೆಚ್ಚಿಸಿತ್ತು ಎಂದು ಹೇಳಲಾಗಿದೆ.

## ರಾಷ್ಟ್ರ ಧ್ವಜ ಸಂಹಿತೆ ಅರಿವು ಅತ್ಯವಶ್ಯಕ: ಉದಯಕುಮಾರ್ ಚಿಂಚೋಳಿ

**ಕಲಬುರಗಿ,ಮಾ.2–**ಪ್ರತಿಯೊಬ್ಬರೂ ರಾಷ್ಟ್ರ ಗೀತೆ ಹಾಗೂ ರಾಷ್ಟ್ರ ಧ್ವಜ ಸೇರಿದಂತೆ ರಾಷ್ಟ್ರ ಲಾಂಛನಗಳಿಗೆ ಗೌರವ ನೀಡುವ ಜತೆಗೆ ಅವುಗಳ ಬಳಕೆಯ ಬಗ್ಗೆಯೂ ತಿಳಿದುಕೊಂಡಿರಬೇಕು, ದೇಶದ ಪ್ರಜೆಯು ರಾಷ್ಟ್ರಧ್ವಜ ಸಂಹಿತೆಯನ್ನು ಅರಿಯುವುದು ಅತ್ಯವಶ್ಯಕ' ಎಂದು ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳಾದ ಉದಯಕುಮಾರ್ ಚಿಂಚೋಳಿ ಹೇಳಿದರು.

ಅವರು ನಗರದ ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಪಿಡಿಎ ಇಂಜಿನಿಯರಿಂಗ್ ಕಾಲೇಜಿನ ಪ್ರೊ.ಎಸ್.ವಿ ಮಲ್ಲಾಪೂರ ಯಾಂತ್ರಿಕ ತಂತ್ರಜ್ಞಾನ ವಿಭಾಗದಲ್ಲಿ ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆ ಹಾಗೂ ಭಾರತ ಸೇವಾದಳ ತಾಲೂಕು ಸಮಿತಿ ಸಂಯುಕ್ತಾಶ್ರಯದಲ್ಲಿ ನಡೆದ ರಾಷ್ಟ್ರಧ್ವಜ, ರಾಷ್ಟ್ರಗೀತೆ ಕುರಿತು ಮಾಹಿತಿ ತರಬೇತಿ ಶಿಬಿರದಲ್ಲಿ ಮಾತನಾಡುತ್ತಿದ್ದರುರಾಷ್ಟ್ರಗೀತೆ ಮತ್ತು ರಾಷ್ಟ್ರಧ್ವಜಕ್ಕೆ ಯಾವುದೇ ರೀತಿಯಲ್ಲಿ ಅಪಮಾನವಾದರೂ ಅದು ಅಪರಾಧವಾಗುತ್ತದೆ ಎಂದು ಅವರು ಎಚ್ಚರಿಸಿದರು.ರಾಷ್ಟ್ರ ಧ್ವಜವನ್ನು ಖಾದಿ ಭಂಡಾರ ಗಳಲ್ಲಿ ಅದರಲ್ಲಿಯೂ ಐಎಸ್‌ಐ ಚಿಹ್ನೆ ಇರುವ ಧ್ವಜವನ್ನೇ ಖರೀದಿಸಬೇಕು. ನಿರ್ದಿಷ್ಟ ಅಳತೆ ಧ್ವಜವನ್ನೇ ಬಳಸಬೇಕು. ಮಾರುಕಟ್ಟೆಯಲ್ಲಿ ಸಿಗುವ ಧ್ವಜಗಳನ್ನು ಎಂದೂ ಬಳಸಬಾರದು. ಅಲ್ಲದೆ ಮಕ್ಕಳಿಗೂ ಸಹಾ ರಾಷ್ಟ್ರ ಧ್ವಜದ ಮಹತ್ವ ಹಾಗೂ ಅದರ ಆರೋಹಣ ಮತ್ತು ಅವರೋಹಣದ ಬಗ್ಗೆ ಅರಿವು ಮೂಡಿಸಬೇಕು ಎಂದರು.ರಾಷ್ಟ್ರ ಗೀತೆಯನ್ನು ಹಾಡುವಾಗ ಅನೇಕ ನಿಯಮಗಳಿದ್ದು, ಸ್ಪಷ್ಟ ಮತ್ತು ತಪ್ಪಿಲ್ಲದಂತೆ ರಾಷ್ಟ್ರಗೀತೆಯನ್ನು ಹಾಡ ಬೇಕು. ಅಲ್ಲದೇ ರಾಷ್ಟ್ರಧ್ವಜವನ್ನು ಹಾರಿಸಿದ ಸಂದರ್ಭದಲ್ಲಿ ವಂದೇ ಮಾತರಂ, ರಾಷ್ಟ್ರಗೀತೆ, ಧ್ವಜಗೀತೆಗಳನ್ನು ಕಡ್ಡಾಯ ವಾಗಿ ಹಾಡಬೇಕು. ಧ್ವಜಸ್ತಂಭವು ನಿರ್ದಿಷ್ಟ ಅಳತೆಯಲ್ಲಿರಬೇಕೆಂದೇನು ಇಲ್ಲ . ಆದರೆ ಧ್ವಜಸ್ತಂಭ ಹಾಗೂ ಧ್ವಜದ ಕಂಬ ಬಿಳಿ ಬಣ್ಣದಿಂದ ಕೂಡಿರಬೇಕು. ಧ್ವಜಾರೋಹಣ ಹಾಗೂ ಧ್ವಜ ಅರೋಹಣದ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ಪ್ರತಿಯೊಂದು ಹಂತವನ್ನು, ಧ್ವಜಕ್ಕೆ ಕಟ್ಟುವ ನೂಲಿನ ದಾರ, ಧ್ವಜ ಕಂಬದ ಸುತ್ತಳತೆ, ಧ್ವಜ ರಕ್ಷಕರ ಪಾತ್ರ ಮತ್ತಿತರ ವಿಚಾರಗಳ ಬಗ್ಗೆ ಮಾಹಿತಿ ನೀಡಿದರು.ಕಲಬುರ್ಗಿ ಜಿಲ್ಲಾ ಕಾರ್ಯದರ್ಶಿ ಸುರೇಶ್ ಬಡಿಗೇರ ಮಾತನಾಡಿದರು. ಜಿಲ್ಲಾ ಸಮಿತಿ ಸದಸ್ಯರಾದ ಲಕ್ಷ್ಮೀಕಾಂತ ರಾಕಾ, ಉಪ ಪ್ರಾಚಾರ್ಯರಾದ ಡಾ ಭಾರತಿ ಹರಸೂರ ವೇದಿಕೆ ಮೇಲೆ ಉಪಸ್ಥಿತರಿದ್ದರು.ಜಿಲ್ಲಾ ಸಂಘಟಕ ಚಂದ್ರಶೇಖರ ಜಮಾದಾರ ಪ್ರಾಸ್ತಾವಿಕವಾಗಿ ಮಾತನಾಡಿದರು ಪ್ರಾಚಾರ್ಯರಾದ ಡಾ ಎಸ್ ಆರ್ ಪಾಟೀಲ್ ಸ್ವಾಗತಿಸಿದರು,ಬಾ ಸುಜಾತಾ ಪಾಟೀಲ ಕಾರ್ಯಕ್ರಮ ನಿರೂಪಿಸಿದರು.

### ಕೆ.ಗುಡದಿನ್ನಿ ಗ್ರಾಮದಲ್ಲಿ ಎನ್.ಎಸ್.ಎಸ್. ವಿಶೇಷ ಶಿಬಿರ

# ಜನಪದ ಸಾಹಿತ್ಯ ನಮ್ಮ ಶ್ರೇಷ್ಠ ಸಂಸ್ಕೃತಿಯ ಸಂಪತ್ತು – ರಮೇಶಬಾಬು ಯಾಳಗಿ



**ಮಾನ್ವಿ–** ಮುಂದಿನ ಪೀಳಿಗೆಗೆ ಮಾರ್ಗದರ್ಶನ ಮಾಡುವ ಜನಪದ ಸಾಹಿತ್ಯ ನಮ್ಮ ಸಂಸ್ಕೃತಿಯ
ಜೀವಂತ ಸಂಪತ್ತು ಎಂದು ಸಾಹಿತಿ ರಮೇಶಬಾಬು ಯಾಳಗಿ ಹೇಳಿದರು.
ಅವರು ಸಿರವಾರ ತಾಲೂಕಿನ ಕೆ.ಗುಡದಿನ್ನಿ ಗ್ರಾಮದಲ್ಲಿ ಮಾನ್ವಿ ಪಟ್ಟಣದ ಕಲ್ಮಠದ ಕೆ.ಪಿ.ಎಸ್.ಎಸ್. ಪದವಿ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನಾ ಘಟಕ ಆಯೋಜಿಸಿರುವ 2025–26 ನೇ ಸಾಲಿನ ವಿಶೇಷ ಶಿಬಿರದಲ್ಲಿ "ಜನಪದ ಸಾಹಿತ್ಯದ ಪ್ರಸ್ತುತತೆ " ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಸಾಮಾಜಿಕ ಬಾಂಧವ್ಯ ಬಲಪಡಿಸುವ ಸಾಧನವಾಗಿರುವ ಮೌಖಿಕ ಪರಂಪರೆಯ ಮೂಲಕ ಹರಿದು ಬಂದ ಈ ಜನಪದ ಹಾಡುಗಳು ಗ್ರಾಮೀಣ ಬದುಕಿನ ನೈಜ ಪ್ರತಿಫಲನಗಳಾಗಿವೆ.
ಮಾನವೀಯ ಸಂಬಂಧಗಳು, ನೈತಿಕತೆಯ ನಡತೆ, ಸಹಬಾಳ್ವೆ ನೆನೆಪಿಸುವಲ್ಲಿ ಜನಪದ ಸಾಹಿತ್ಯ ಪ್ರಸ್ತುತವಾಗಿದೆ.
ಗ್ರಾಮೀಣ ಜನಜೀವನ ಪ್ರತಿಬಿಂಬಿಸುವ ಜನಪದ ಸಾಹಿತ್ಯದಲ್ಲಿ ಸಮಗ್ರ ಜೀವನಾನುಭವವಿದೆ, ನೈತಿಕ ಜೀವನದ ಪರಿಣಾಮಕಾರಿ ಪಾಠವಿದೆ, ಸುಂದರ ಬದುಕಿನ ಸೂತ್ರಗಳಿವೆ, ಬದುಕಿಗೆ ಗೌರವ ತಂದು ಕೊಡುವ, ನಮ್ಮೆಲ್ಲರ ಬಾಳನ್ನು ಬೆಳಗಿಸುವ ಸದ್ಗುಣಗಳ, ಉನ್ನತ ಆದರ್ಶಗಳ ಜ್ಞಾನದ ರಾಶಿಯೇ ಜನಪದ ಸಾಹಿತ್ಯದಲ್ಲಿ ಅಡಕವಾಗಿದೆ ಎಂದ ಯಾಳಗಿ ಅವರು ಜಾನಪದ ಭೂತಕಾಲದ ಪ್ರತಿಧ್ವನಿಯಾಗಿರುವಂತೆ ವರ್ತಮಾನ ಕಾಲದ ಕಸುವುಳ್ಳ ಧ್ವನಿಯು ಆಗಿದೆ ಎಂದು ಅಭಿಪ್ರಾಯಪಟ್ಟರು.

ವಿಶೇಷ ಶಿಬಿರದ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಲ್ಮಠ ಪದವಿ ಕಾಲೇಜಿನ ಪ್ರಾಚಾರ್ಯ ಸಿದ್ದನಗೌಡ ಪಾಟೀಲ ವಹಿಸಿದ್ದರು.ಊರಿನ ಪ್ರಮುಖರಾದ ಕುರುಮಯ್ಯ, ಅಮೀರ್ ಖಾನ್, ರಾಷ್ಟ್ರೀಯ ಸೇವಾ ಯೋಜನಾ ಘಟಕದ ಕಾರ್ಯಕ್ರಮಾಧಿಕಾರಿ ಆನಂದ ಉಪ್ಪಳ, ಉಪನ್ಯಾಸಕ ಸಿದ್ದೇಶ್ ಪೋಲಿಸ್ ಪಾಟೀಲ ಜಾಲವಾಡಗಿ, ಉಪನ್ಯಾಸಕಿ ಲಕ್ಷೀ ನಸಲಾಪುರ ಮುಂತಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶಿಬಿರಾರ್ಥಿ ಸಂಗೀತಾ ವರದಿ ವಾಚಿಸಿದರು, ಈರೇಶಮ್ಮ ಸ್ವಾಗತಿಸಿದರು ಅಕ್ಷತಾ ಕಾರ್ಯಕ್ರಮ ನಿರೂಪಿಸಿದರು.

# ಪರಿಸರದಲ್ಲಿ ಸುಸ್ಥಿರತೆಯನ್ನು ಕಾಪಾಡಿಕೊಳ್ಳಿ –ಕೆ ಶಂಕರ್

ಧೈರ್ಯದ ದಾರಿ

**ಮಾನ್ವಿ.:**ಇಂದು ಕಲ್ಮಠ ಪದವಿ ಮಹವಿದ್ಯಾಲಯದ ವತಿಯಿಂದ ರಾಷ್ಟ್ರೀಯ ಸೇವಾ ಯೋಜನೆ ಘಟಕದ ವಿಶೇಷ ಶಿಬಿರದಲ್ಲಿ ಎರಡನೇ ದಿನದ ಉಪನ್ಯಾಸ ಕಾರ್ಯಕ್ರಮಕ್ಕೆ ವಿಶೇಷ ಉಪನ್ಯಾಸಕರಾಗಿ ಆಗಮಿಸಿದ ಶಂಕರ್ ಕೆ
ಪ್ರಾಚಾರ್ಯರು ಸರಕಾರಿ ಪದವಿ ಪೂರ್ವ ಕಾಲೇಜು ಪೋತ್ನಳ ಇವರು ಗ್ರಾಮೀಣ ಪರಿಸರ ಜಾಗೃತಿ ಎನ್ನುವ ವಿಷಯದ ಮೇಲೆ ಮಾತನಾಡಿ ಪರಿಸರವನ್ನು ನಾವು ಯಥವತ್ತಾಗಿ ಕಾಯ್ದುಕೊಂಡು ಹೋಗಬೇಕು ಇಲ್ಲವಾದರೆ ಮುಂದಿನ ದಿನಮಾನಗಳಲ್ಲಿ ನಮಗೆ ಪರಿಸರದಲ್ಲಿ ದೊರೆಯುವ ಎಲ್ಲಾ ನೈಸರ್ಗಿಕ ಸಂಪನ್ಮೂಲಗಳು ಹಾಳಾಗುತ್ತವೆ ಮುಂದಿನ ಪೀಳಿಗೆ ಇಂತಹ ಸಂಪನ್ಮೂಲಗಳು ಇದ್ದವು ಇಲ್ಲವೋ ಎನ್ನುವ ಸಂದರ್ಭಗಳು ಬರಬಹುದು ಆದಕಾರಣ ಪರಿಸರವನ್ನು ಹಾಳು ಮಾಡದೆ ಇರುವಂತ ಸಂಪನ್ಮೂಲಗಳನ್ನು ಉಳಿಸಿಕೊಳ್ಳುವುದು ನಮ್ಮ ಜವಾಬ್ದಾರಿಯಾಗಿರುತ್ತದೆ ಎಂದು ವಿದ್ಯಾರ್ಥಿಗಳಿಗೆ ಹಾಗೂ ಗ್ರಾಮಸ್ಥರಿಗೆ ತಿಳಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಲ್ಮಠ ಕಾಲೇಜಿನ ಉಪನ್ಯಾಸಕರಾದ ಹನುಮಂತಪ್ಪ ಹರವಿ ವಹಿಸಿದ್ದರು.

ಇವರು ಮಾತನಾಡಿ ವಿಶೇಷ ಶಿಬಿರದ ಶಿಬಿರಾರ್ಥಿಗಳಿಗೆ



ಪರಿಸರದ ಬಗ್ಗೆ ಕಾಳಜಿ ಇರಬೇಕು ನೀವು ನಿಮ್ಮ ಮನೆಯಲ್ಲಿ ಮನೆಗೆ ಹೋದ ನಂತರ ನಮ್ಮ ಸುತ್ತಮುತ್ತಲಿನ ಪರಿಸರವನ್ನು ಸಂರಕ್ಷಣೆ ಮಾಡುವ ಕಾರ್ಯದಲ್ಲಿ ಭಾಗವಹಿಸಿ ಎಂದು ಹೇಳಿದರು

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಬಸವರಾಜ್ ಯಾದವ್ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು. ತಿಕ್ಕಯ್ಯ ಯಾದವ್ ಮಾಜಿ ಗ್ರಾಮ ಪಂಚಾಯತ್ ಸದಸ್ಯರು ಗುಡದಿನ್ನಿ ಉಪನ್ಯಾಸಕರಾದ ರಾಘವೇಂದ್ರ ಲಕ್ಷ್ಮಿ ಶರಣಮ್ಮ ಹಾಗೂ ಊರಿನ ಗ್ರಾಮಸ್ಥರು ಭಾಗವಹಿಸಿದ್ದರು ಕಾರ್ಯಕ್ರಮ ಸ್ವಾಗತವನ್ನು ಸಹನಾ ಹಾಗೂ ವಂದನಾರ್ಪಣೆ ಸೌಮ್ಯ ನಿರೂಪಣೆ ಶ್ರೀದೇವಿ ನೆರವೇರಿಸಿದರು

# ಬೇಡಿಕೆ ಈಡೇರಿಕೆಗೆ ಆಗ್ರಹ:ಅಂಗನವಾಡಿ ಕಾರ್ಯಕರ್ತೆಯರ ಮುಷ್ಕರ



**ರಾಜ್ಯ ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರನ್ನು ಖಾಯಂಗೊಳಿಸುವಂತೆ ಒತ್ತಾಯಿಸಿ ಹಾಗೂ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್‌ನ ಸದಸ್ಯರು ಇಂದು ನಗರದ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಿದರು.**

**ಬೆಂಗಳೂರು,ಮಾ.2:**ರಾಜ್ಯ ಸರ್ಕಾರದ ವಿರುದ್ಧ ಅಂಗನವಾಡಿ ಕಾರ್ಯಕರ್ತೆಯರು ಇಂದಿನಿಂದ ರಾಜ್ಯವ್ಯಾಪಿ ಮುಷ್ಕರ ಆರಂಭಿಸಿದ್ದಾರೆ. ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ನಗರದ ಫ್ರೀಡಂ ಪಾರ್ಕ್ ನಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಸರ್ಕಾರ ತನ್ನ ಪ್ರಣಾಳಿಕೆಯಲ್ಲಿ 6ನೇ ಗ್ಯಾರಂಟಿಯಾಗಿ ಅಂಗನವಾಡಿ ಕಾರ್ಯಕರ್ತೆಯರ ಮಾಸಿಕ ಗೌರವ ಧನವನ್ನು 15,000 ಹಾಗೂ ಸಹಾಯಕಿಯರ ಗೌರವ ಧನವನ್ನು 10,000ಕ್ಕೆ ಹೆಚ್ಚಿಸುವುದಾಗಿ ಭರವಸೆ ನೀಡಿತ್ತು. ಆದರೆ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಎರಡೂವರೆ ವರ್ಷಗಳಾದರೂ ಭರವಸೆ ಈಡೇರಿಸಿಲ್ಲ ಎಂದು ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ಜಯಮ್ಮ ಆರೋಪಿಸಿದ್ದಾರೆ.

ಈ ಬಾರಿಯ ರಾಜ್ಯ ಬಜೆಟ್‌ನಲ್ಲಿ ನಮ್ಮ ಗೌರವ ಧನ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿದ್ದಾರೆ.

**ಪ್ರಮುಖ ಬೇಡಿಕೆಗಳು:** ಅಂಗನವಾಡಿ ಕಾರ್ಯಕರ್ತೆಯರ ಗೌರವ ಧನವನ್ನು 15,000ಕ್ಕೆ ಹೆಚ್ಚಿಸಬೇಕು. ಅಂಗನವಾಡಿ ಸಹಾಯಕಿಯರ ಗೌರವ ಧನವನ್ನು 10,000ಕ್ಕೆ ಹೆಚ್ಚಿಸಬೇಕು. ನಿವೃತ್ತಿ ಹೊಂದಿದವರಿಗೆ ಗ್ರಾಚ್ಯುಟಿ ನೀಡಬೇಕು.ಅಂಗನವಾಡಿ ಕೇಂದ್ರಗಳಲ್ಲಿ ಎಲ್‌ಕೆಜಿ ಮತ್ತು ಯುಕೆಜಿ ತರಗತಿಗಳನ್ನು ಆರಂಭಿಸಬೇಕು.

ಪೌಷ್ಟಿಕ ಆಹಾರ ತಯಾರಿಕೆಗಾಗಿ ಹೆಚ್ಚುವರಿ ಅನುದಾನ ನೀಡಬೇಕು.ಡಿಎ (ಪ್ರಯಾಣ ಭತ್ಯೆ) ಹೆಚ್ಚಿಸಬೇಕು.ಕಟ್ಟಡ ನಿರ್ಮಾಣಕ್ಕೆ ಮುಂಗಡ ಹಣ ಬಿಡುಗಡೆ ಮಾಡಬೇಕು.ಉಚಿತ ವೈದ್ಯಕೀಯ ಸೌಲಭ್ಯ ಒದಗಿಸಬೇಕು. ಮಾಸಿಕ ಭತ್ಯೆ ಹೆಚ್ಚಳ ಮಾಡಬೇಕು.ಮಾರುಕಟ್ಟೆ ದರಕ್ಕೆ ಅನುಗುಣವಾಗಿ ಮೊಟ್ಟೆ ಹಣ ಬಿಡುಗಡೆ ಮಾಡಬೇಕು.

ಅನುಕಂಪದ ನೇಮಕಾತಿಯಲ್ಲಿ ವಾಸ ಸ್ಥಳ ನಿಯಮ ಸಡಿಲಿಕೆ ಮಾಡಬೇಕು.ಬಿಪಿಎಲ್ ಕಾರ್ಡ್ ಮುಂದುವರಿಸಲು ಕ್ರಮ ಕೈಗೊಳ್ಳಬೇಕು.ನಿವೃತ್ತಿ ವಯಸ್ಸನ್ನು 65 ವರ್ಷಕ್ಕೆ ಹೆಚ್ಚಿಸಬೇಕು.ಹೀಗೆ ಹತ್ತರೂ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಫ್ರೀಡಂ ಪಾರ್ಕ್‌ನಲ್ಲಿ ಸಾವಿರಾರು ಅಂಗನವಾಡಿ ಕಾರ್ಯಕರ್ತೆಯರು ಅನಿರ್ಧಿಷ್ಟ ಅವಧಿ ಮುಷ್ಕರ ನಡೆಸುತ್ತಿದರೆ.ಮಾರ್ಚ್ 6 ರಂದು ರಾಜ್ಯ ಬಜೆಟ್ ಮಂಡನೆ ಇರುವ ಹಿನ್ನೆಲೆಯಲ್ಲಿ ಸರ್ಕಾರ ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳಿಗೆ ಯಾವ ರೀತಿಯಲ್ಲಿ ಸ್ಪಂದಿಸಲಿದೆ ಎಂಬುದರ ಬಗ್ಗೆ ಕಾದು ನೋಡಬೇಕಾಗಿದೆ.

# ಇರಾನ್–ಇಸ್ರೇಲ್ ಯುದ್ಧ ಕಚ್ಚಾ ತೈಲ ಬೆಲೆ ದುಬಾರಿ

**ನವದೆಹಲಿ,ಮಾ.2**–ಇರಾನ್ ಮತ್ತು ಇಸ್ರೇಲ್ ನಡುವೆ ಹೆಚ್ಚುತ್ತಿರುವ ಉದ್ವಿಗ್ನತೆಯ ನೇರ ಪರಿಣಾಮ ಈಗ ಸಾಮಾನ್ಯ ಜನರ ಜೇಬಿನ ಮೇಲೆ ಬೀಳುವ ಸಾಧ್ಯತೆಯಿದೆ. ಈ ಯುದ್ಧದಿಂದಾಗಿ, ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಗಳು ಏರಿಕೆಯಾಗಿವೆ. ಮುಂಬರುವ ದಿನಗಳಲ್ಲಿ ಭಾರತದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳು ಹೆಚ್ಚಾಗುವ ಸೂಚನೆಗಳಿವೆ.

ಯುದ್ಧ ತೀವ್ರಗೊಂಡರೆ, ಈ ಬೆಲೆಗಳು ರಷ್ಯಾ–ಉಕ್ರೇನ್ ಯುದ್ಧದ ಸಮಯದಲ್ಲಿ ಕಂಡುಬಂದ $90 ಮಟ್ಟವನ್ನು ದಾಟಬಹುದೆಂಬ ಭಯವಿದೆ. ಭಾರತದ ಕಚ್ಚಾ ತೈಲ ಆಮದು ಮುಖ್ಯವಾಗಿ 'ಕೆಂಪು ಸಮುದ್ರ'ದ ಮೂಲಕ. ಯುದ್ಧದ ಕಾರಣದಿಂದಾಗಿ ಈ ಮಾರ್ಗವನ್ನು ಮುಚ್ಚಲಾಗಿದೆ. ಪರಿಣಾಮವಾಗಿ, ಪರ್ಯಾಯ ದೂರದ ಮಾರ್ಗಗಳ ಮೂಲಕ ತೈಲವನ್ನು ಈಗ ಆಮದು ಮಾಡಿಕೊಳ್ಳಬೇಕಾಗಿರುವುದರಿಂದ ಸಾರಿಗೆ ವೆಚ್ಚಗಳು ಗಮನಾರ್ಹವಾಗಿ ಹೆಚ್ಚಾಗುತ್ತವೆ. ರಷ್ಯಾ–ಉಕ್ರೇನ್ ಯುದ್ಧದ ಸಮಯದಲ್ಲಿ ಕಚ್ಚಾ ತೈಲದ ಬೆಲೆ $90 ಆಗಿದ್ದಾಗ, ಡಾಲರ್ 78 ರೂ.ನಲ್ಲಿತ್ತು. ಆದರೆ, ಈಗ ಡಾಲರ್ ಸುಮಾರು 90 ರೂ. ಆಗಿದೆ.

ಕಚ್ಚಾ ತೈಲ ಬೆಲೆಗಳು ಹೆಚ್ಚಾದರೆ, ರೂಪಾಯಿ ದುರ್ಬಲ ಮೌಲ್ಯದಿಂದಾಗಿ ಭಾರತವು ಹೆಚ್ಚಿನ ವಿದೇಶಿ ವಿನಿಮಯವನ್ನು ಪಾವತಿಸಬೇಕಾಗುತ್ತದೆ .ಇದಕ್ಕೂ ಮೊದಲು, ಕಚ್ಚಾ ತೈಲವು $90 ತಲುಪಿದಾಗ, ದೇಶದಲ್ಲಿ ಪೆಟ್ರೋಲ್ ಬೆಲೆಗಳು ಲೀಟರ್‌ಗೆ 122 ರೂ. ಮತ್ತು ಡೀಸೆಲ್ ಬೆಲೆಗಳು 105 ರೂ. ತಲುಪಿದ್ದವು. ಪ್ರಸ್ತುತ ಪರಿಸ್ಥಿತಿ ಇನ್ನಷ್ಟು ಗಂಭೀರವಾಗುವ ಸಾಧ್ಯತೆಯಿದೆ. ದೇಶಕ್ಕೆ ಸಮಾಧಾನಕರ ವಿಷಯವೆಂದರೆ ಭಾರತವು ಪ್ರಸ್ತುತ ಮೂರು ತಿಂಗಳಿಗೆ ಸಾಕಾಗುವಷ್ಟು ಕಚ್ಚಾ ತೈಲದ ದಾಸ್ತಾನು ಹೊಂದಿದೆ, ಇದನ್ನು ತಾಂತ್ರಿಕವಾಗಿ 'ಬಫರ್ ಸ್ಟಾಕ್' ಎಂದು ಕರೆಯಲಾಗುತ್ತದೆ.

ಇದಲ್ಲದೆ, ಕೆಲವು ಕಚ್ಚಾ ತೈಲ ಹಡಗುಗಳು ಭಾರತಕ್ಕೆ ತೆರಳುತ್ತಿವೆ. ಕಚ್ಚಾ ತೈಲ ಬೆಲೆಗಳು ನಿರಂತರವಾಗಿ ಏರಿಕೆಯಾಗಿ ಯುದ್ಧ ಮುಂದುವರಿದರೆ, ಕೇಂದ್ರ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಹೆಚ್ಚಿಸಬೇಕಾಗುತ್ತದೆ ಎಂದು ಮಹಾರಾಷ್ಟ್ರ ಪೆಟ್ರೋಲಿಯಂ ಡೀಲರ್ಸ್ ಅಸೋಸಿಯೇಷನ್ ಅಧ್ಯಕ್ಷ ಅಮಿತ್ ಗುಪ್ತಾ ಹೇಳಿದ್ದಾರೆ.

# ಜಗದ್ಗುರು ರೇಣುಕ ಭಗವತ್ಪಾದರು ಮಾನವ ಜನಾಂಗಕ್ಕೆ ಶಾಶ್ವತ ಮೌಲ್ಯಗಳನ್ನು ನೀಡಿದ್ದಾರೆ: ಮಹಾಂತ ಶ್ರೀ



**ಆಳಂದ:ಮಾ.2:** ಬಸವಾದಿ ಶರಣರು ವಚನ ಸಾಹಿತ್ಯದ ಮೂಲಕ ಸಮಾಜಕ್ಕೆ ದಾರಿದೀಪವಾದಂತೆ, ಜಗದ್ಗುರು ಶ್ರೀ ರೇಣುಕಾ ಭಗವತ್ಪಾದರು 'ಸಿದ್ಧಾಂತ ಶಿಖಾಮಣಿ' ಎಂಬ ಗ್ರಂಥವನ್ನು ರಚಿಸಿ ಮಾನವ ಜನಾಂಗಕ್ಕೆ ಶಾಶ್ವತ ಮೌಲ್ಯಗಳನ್ನು ನೀಡಿದ್ದಾರೆ ಎಂದು ಆಳಂದ, ನಂದವಾಡಗಿ ಮತ್ತು ಜಾಲವಾದಿ ಮಠದ ಪೀಠದ ಹಿರಿಯರಾದ ಶ್ರೀ ಮಹಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಪಟ್ಟಣದ ಶ್ರೀ ಮಹಾಂತೇಶ್ವರ ಸಂಸ್ಥಾನ ಹಿರೇಮಠದಲ್ಲಿ ಭಕ್ತಿಭಾವ ಹಾಗೂ ಸಂಭ್ರಮದ ವಾತಾವರಣದಲ್ಲಿ ಜಗದ್ಗುರು ಶ್ರೀ ರೇಣುಕಾಚಾರ್ಯರ ಜಯಂತಿ ಸಮಾರಂಭದಲ್ಲಿ ರೇಣುಕರ ಪ್ರತಿಮೆಗೆ ಪೂಜೆ ಮಾಲಾರ್ಪಣೆ ಕೈಗೊಂಡು ಅವರು ಆಶೀರ್ವಚನ ನೀಡಿದರು.

ಸಿದ್ಧಾಂತ ಶಿಖಾಮಣಿ ಗ್ರಂಥದಲ್ಲಿರುವ ತತ್ವಗಳನ್ನು ಪ್ರೀತಿ, ಶ್ರದ್ಧೆ ಮತ್ತು ಭಕ್ತಿಯಿಂದ ಅಳವಡಿಸಿಕೊಂಡರೆ ಜೀವನ ಪಾವನವಾಗುತ್ತದೆ. ಮಹಾತ್ಮರನ್ನು ಸ್ಮರಿಸುವುದೇ ಶ್ರೇಷ್ಠ ಸಾಧನೆಯಾಗಿದ್ದು, ಅವರ ಮಾರ್ಗದಲ್ಲಿ ನಡೆಯುವುದರಿಂದ ಬದುಕು ಸಾರ್ಥಕವಾಗುತ್ತದೆ. ಮಹಾಂತೇಶ್ವರನ ಕೃಪೆ ಸದಾ ಭಕ್ತರ ಮೇಲಿರಲಿ ಎಂದು ಅವರು, "ವೀರಶೈವ ಲಿಂಗಾಯತರಿಗೆ ಫಲ್ಗುಣ ಶುದ್ಧ ಏಕಾದಶಿ ಅತ್ಯಂತ ಪವಿತ್ರ ದಿನವಾಗಿದ್ದು, ಜಗದ್ಗುರು ಶ್ರೀ ರೇಣುಕಾಚಾರ್ಯರ ಅವತರಣ ದಿನವೂ ಹೌದು. ವೀರಶೈವ ಧರ್ಮ ಸಂಸ್ಥಾಪನಾಚಾರ್ಯರಾದ ಶ್ರೀ ರೇಣುಕಾ ಭಗವತ್ಪಾದರು ಭೂಮೇಶ್ವರ ಲಿಂಗದಲ್ಲಿ ಅವತರಿಸಿ, ಈ ನಾಡಿನಲ್ಲಿ ವೀರಶೈವ ಧರ್ಮವನ್ನು ಸ್ಥಾಪಿಸಿ ಜಗತ್ತಿನ ಕಲ್ಯಾಣಕ್ಕಾಗಿ ಧರ್ಮ, ನೀತಿ ಮತ್ತು ಆಧ್ಯಾತ್ಮದ ಮಾರ್ಗವನ್ನು ಮಾನವಕುಲಕ್ಕೆ ತೋರಿಸಿದ್ದಾರೆ. ಅವರ ಬೋಧನೆಗಳನ್ನು ಅನುಸರಿಸುವುದರಿಂದ ಪ್ರತಿಯೊಬ್ಬರೂ ಧರ್ಮವಂತರಾಗಿ, ನೀತಿವಂತರಾಗಿ ಹಾಗೂ ಆಧ್ಯಾತ್ಮಿಕವಾಗಿ ಶುದ್ಧ ಜೀವನ ನಡೆಸಲು ಸಾಧ್ಯವಾಗುತ್ತದೆ," ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ನ್ಯಾಯವಾದಿ ಮಹಾದೇವ ಹತ್ತಿ, ರಾಜಕುಮಾರ ಅಚಲೇರಿ, ಪತ್ರಕರ್ತ ಮಹೇಶ ಸಾಕರೆ, ಭಕ್ತಾದಿ ವಿವೇಕಾನಂದ ಹತ್ತಿ, ಗುರು ವಣದೆ, ಶಿವುಸ್ವಾಮಿ, ಮಲ್ಲಯ್ಯಾ ಸ್ವಾಮಿ ಚೌಕಿಮಠ, ಗುಂಡಪ್ಪ ಮೇಂತೆ, ಶಿವಕುಮಾರ ಎಸ್. ಪರೆಗೆ, ಮಹಾಂತೇಶ ಡೊಳ್ಳೆ, ಸತೀಶ ಪಾಟೀಲ, ಸಿದ್ರಾಮ ಬುಕ್ಕೆ, ಯಲ್ಲಾಲಿಂಗ ಬಿರಾದಾರ, ಕುಂಬಾರ ಸಮಾಜ ಅಧ್ಯಕ್ಷ ಶರಣು ಟಿ. ಕುಂಬಾರ, ಶರಣು ಬಿ. ಕುಂಬಾರ, ಶಿವಕುಮಾರ ಎಂ. ವಿಭೂತೆ ಪಾಟೀಲ ಸೇರಿದಂತೆ ಅನೇಕ ಶರಣರು ಹಾಗೂ ಶರಣಿಯರು ಭಕ್ತಿಪೂರ್ವಕವಾಗಿ ಭಾಗವಹಿಸಿದ್ದರು.

# ಮೂಲನಿವಾಸಿ ಮಹಾಪುರುಷರ ಸಮಾನತೆ–ಸಾಮಾಜಿಕ ನ್ಯಾಯದ ಸಂದೇಶ ಪಾಲನೆಗೆ ಉಸ್ತುರಿ ಶ್ರೀ ಕರೆ



**ಆಳಂದ:ಮಾ.2:** ಭಾರತೀಯ ಮೂಲನಿವಾಸಿ ಮಹಾಪುರುಷ ಸಮಾನತೆ–ಸಾಮಾಜಿಕ ನ್ಯಾಯದ ಸಂದೇಶಗಳು ಅಳವಡಿಸಿಕೊಂಡು ಜಾತಿ, ವರ್ಗ, ಲಿಂಗ ಭೇದ ಮರೆತು ಮಾನವೀಯತೆಯ ಮೌಲ್ಯಗಳನ್ನು ಅಳವಡಿಸಿಕೊಂಡಾಗ ಮಾತ್ರ ಸಶಕ್ತ ಸಮಾಜ ನಿರ್ಮಾಣ ಸಾಧ್ಯವಿದೆ. ಎಂದು ಉಸ್ತುರಿ ಧುತ್ತರಗಾಂವ ಮಠದ ಶ್ರೀ ವಿಶ್ವನಾಥ ಕೋರಣೇಶ್ವರ ಮಹಾಸ್ವಾಮಿಗಳು ಹೇಳಿದರು.

ತಾಲೂಕಿನ ದೇಗಾಂವ ಗ್ರಾಮದಲ್ಲಿ ಭೀಮಸೇನೆ ಆಶ್ರಯದಲ್ಲಿ ರಮಾಬಾಯಿ ಜಯಂತಿ ಹಾಗೂ ಕರ್ನಾಟಕ ಭೀಮಸೇನೆ ಗ್ರಾಮ ಶಾಖೆ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ರಮಾಬಾಯಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಶೋಷಿತರ ಧ್ವನಿಯಾಗಿ, ಶಿಕ್ಷಣ ಮತ್ತು ಸಾಮಾಜಿಕ ಜಾಗೃತಿಗೆ ಜೀವನ ಸಮರ್ಪಿಸಿದ ಮಹಾನ್ ವ್ಯಕ್ತಿತ್ವ. ಅವರ ಆದರ್ಶಗಳು ಇಂದಿನ ಸಮಾಜಕ್ಕೂ ದಿಕ್ಕು ತೋರಿಸುತ್ತವೆ. ಬುದ್ಧ, ಬಸವ ಡಾ. ಬಿ.ಆರ್.ಅಂಬೇಡ್ಕರ ಸೇರಿದಂತೆ ಮೂಲನಿವಾಸಿ ಮಹಾಪುರುಷ ಆದರ್ಶಗಳನ್ನು ಆಚರಣೆ ತರಬೇಕು ಎಂದು ಅವರು ಸಲಹೆ ನೀಡಿದರು.

ಗ್ರಾಮಶಾಖೆ ಉದ್ಘಾಟನೆ ನೆರವೇರಿಸಿದ ಜಿಲ್ಲಾ ದಲಿತ ಮುಖಂಡ ಸಂತೋಷ ಹಾದಿಮನಿ ಮಾತನಾಡಿ, "ಭೀಮಸೇನೆ ಸಂಘಟನೆ ಸಮಾಜದ ಅಂಚಿನಲ್ಲಿರುವವರ ಹಕ್ಕುಗಳಿಗಾಗಿ ಹೋರಾಟ ನಡೆಸುವ ವೇದಿಕೆಯಾಗಿದೆ. ಗ್ರಾಮ ಮಟ್ಟದಲ್ಲಿ ಶಾಖೆಗಳ ಸ್ಥಾಪನೆ ಮೂಲಕ ಸಂಘಟನೆ ಬಲಗೊಳ್ಳುತ್ತಿದ್ದು, ಶಿಕ್ಷಣ, ಸಂಘಟನೆ ಮತ್ತು ಹೋರಾಟ ಎಂಬ ತತ್ವಗಳಡಿ ಯುವಜನತೆಯನ್ನು ಮುನ್ನಡೆಸುವ ಕಾರ್ಯ ನಡೆಯಲಿ ಎಂದು ತಿಳಿಸಿದರು.

ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಬಾಬುರಾವ್ ಅರುಣೋದಯ ಜಯಂತಿ ಉದ್ಘಾಟಿಸಿ ಮಾತನಾಡಿ, "ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣಕ್ಕೆ ಶಿಕ್ಷಣ ಹಾಗೂ ಸಂಘಟನೆಯೇ ಮೂಲ. ಗ್ರಾಮೀಣ ಮಟ್ಟದಲ್ಲಿ ಜಾಗೃತಿ ಮೂಡಿಸಿ, ಅಭಿವೃದ್ಧಿಯ ಹಾದಿಯಲ್ಲಿ ಸಾಗಲು ಎಲ್ಲರೂ ಕೈಜೋಡಿಸಬೇಕು" ಎಂದರು.

ಭೀಮಸೇನೆ ಜಿಲ್ಲಾಧ್ಯಕ್ಷ ಸಂಜಯ ಬೋಸ್ಲೆ ಮಾತನಾಡಿ, "ಸಂಘಟಿತ ಶಕ್ತಿ ಮಾತ್ರ ಶೋಷಣೆಯ ವಿರುದ್ಧ ಧ್ವನಿಯಾಗಬಲ್ಲದು. ಪ್ರತಿಯೊಬ್ಬರೂ ಸಂವಿಧಾನದ ಮೌಲ್ಯಗಳನ್ನು ಅರಿತು, ಸಮಾನ ಸಮಾಜ ನಿರ್ಮಾಣಕ್ಕೆ ಶ್ರಮಿಸಬೇಕು" ಎಂದು ಕರೆ ನೀಡಿದರು.

ಭೀಮಸೇನೆ ತಾಲೂಕ ಯುವ ಅಧ್ಯಕ್ಷ ನೀತಿನ ಡೊಲೆ ಅಧ್ಯಕ್ಷತೆ ವಹಿಸಿ ಮಾತನಾಡಿ, "ಯುವಶಕ್ತಿ ಸಮಾಜ ಪರಿವರ್ತನೆಯ ಪ್ರಮುಖ ಚಾಲಕ. ರಮಾಬಾಯಿ ಅವರ ಜೀವನದಿಂದ ಪ್ರೇರಣೆ ಪಡೆದು ಸೇವೆ, ತ್ಯಾಗ ಮತ್ತು ಹೋರಾಟದ ಹಾದಿಯನ್ನು ಯುವಕರು ಅಳವಡಿಸಿಕೊಳ್ಳಬೇಕು" ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರಜ್ವಲ ಡೊಲೆ, ಉಪನ್ಯಾಸಕ ಜಿತೆಂದ್ರ ತಳವಾರ ತಮ್ಮ ವಿಚಾರಗಳನ್ನು ಹಂಚಿಕೊಂಡರು. ನಾಗರ ಸಿಂಗೆ ಪ್ರಾಸ್ತಾವಿಕವಾಗಿ ಮಾತನಾಡಿ ಕಾರ್ಯಕ್ರಮದ ಉದ್ದೇಶವನ್ನು ವಿವರಿಸಿದರು.

ಮಹಿಳಾ ಘಟಕದ ಗಜಾಬಾಯಿ ಆರ್ಯ, ಸುನಂದ ಸಿಂಗೆ, ಬಂಡೆಮ್ಮ, ಚಂದ್ರಕಲಾ ನಡಗೇರಿ ಸೇರಿದಂತೆ ಹಲವಾರು ಮಹಿಳೆಯರು ಸಕ್ರಿಯವಾಗಿ ಪಾಲ್ಗೊಂಡು, ಸಮಾಜ ಪರಿವರ್ತನೆಯಲ್ಲಿ ಮಹಿಳೆಯರ ಪಾತ್ರದ ಮಹತ್ವವನ್ನು ಒತ್ತಿ ಹೇಳಿದರು. ಸಂತೋಷ, ಪ್ರಕಾಶ ತೋಳೆ, ಶಿವುಪ್ರಸನ್ನ ಜೈಭೀಮ ಸುಳ್ಳದ, ಮಹೇಶ ಪೋತೆ, ರವಿ ಗಾಯಕವಾಡ, ಶೇಖರ ಎನ್, ಸಂತೋಷಕುಮಾರ ಪಾಟೀಲ, ಮಲ್ಲಿಕಾರ್ಜುನ ಮೇಲಿನಕೇರಿ, ಕೈಲಾಸ್, ಸಾಗರ, ಸೋಮು ಶೆಟಗಾರ, ಗ್ರಾಮ ಶಾಖೆ ಅಧ್ಯಕ್ಷ ಕಿರಣ ಮೇಲಿನಕೇರಿ ಸೇರಿದಂತೆ ಅನೇಕ ಗಣ್ಯರು ಮತ್ತು ಗ್ರಾಮಸ್ಥರು ಭಾಗವಹಿಸಿದ್ದರು. ಪ್ರಣಯ ಡೊಲೆ ನಿರೂಪಿಸಿದರು.

# ದಲಿತ ಬಂಡಾಯ ಸಾಹಿತ್ಯ ಚಳುವಳಿಗೆ ರಾಯಚೂರು ನೆಲದ ಕೊಡುಗೆ ಅಪಾರ: ರಾಮಣ್ಣ ಬೇರಿಗಿ



ಧೈರ್ಯದ ದಾರಿ

**ಲಿಂಗಸುಗೂರು** : ದಲಿತ ಬಂಡಾಯ ಸಾಹಿತ್ಯ ಚಳುವಳಿಗೆ ಮೂಲ ನೆಲೆ ರಾಯಚೂರು ಜಿಲ್ಲೆಯಾಗಿದ್ದು, ಚನ್ನಣ್ಣ ವಾಲೀಕರ, ಜಂಬಣ್ಣ ಅಮರಚಿಂತ ಹಾಗೂ ಬೊಳಬಂಡೆಪ್ಪ ಅವರ ಕೊಡುಗೆ ಅಪಾರವಾಗಿದೆ ಎಂದು ಸಿಂಧನೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಉಪನ್ಯಾಸಕ ರಾಮಣ್ಣ ಬೇರಿಗಿ ಅಭಿಪ್ರಾಯಪಟ್ಟರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ಆಯೋಜಿಸಿದ್ದ "ದಲಿತ ಬಂಡಾಯ ಸಾಹಿತ್ಯ ಚಳುವಳಿ: ಅರ್ಧ ಶತಮಾನದ ನಡೆಗೆ" ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ದಲಿತ ಹಾಗೂ ಬಂಡಾಯ ಸಾಹಿತ್ಯಗಳ ಮೂಲ ಬೇರೆಬೇರೆಯಾಗಿದ್ದರೂ, ಅವುಗಳ ತಳಹದಿ ಒಂದೇ ಆಗಿದೆ. ಬೂಸಾ ಪ್ರಕರಣ ದಲಿತ ಬಂಡಾಯ ಸಾಹಿತ್ಯ ಹುಟ್ಟಿಗೆ ಪ್ರಮುಖ ಕಾರಣವಾದರೂ, ಜಗತ್ತಿನ ವಿವಿಧ ಸಾಹಿತ್ಯಗಳೂ ಈ ಚಳುವಳಿಗೆ ಪ್ರೇರಣೆಯಾದವು ಎಂದು ತಿಳಿಸಿದರು.

ರಾಯಚೂರು ನೆಲವೇ ಬಂಡಾಯ ಸಾಹಿತ್ಯಕ್ಕೆ ಬೇರೂರಿದ ತಾಣವಾಗಿದ್ದು, ಕರ್ನಾಟಕದ ಸಂದರ್ಭದಲ್ಲಿ ಈ ಸಾಹಿತ್ಯ ಹಲವು ಸಂವೇದನೆಗಳ ಮೂಲಕ ಬೆಳೆಯಿತು. ಮಹಿಳಾ ಸಂವೇದನೆ, ಮುಸ್ಲಿಂ ಸಂವೇದನೆ ಸೇರಿದಂತೆ ಹಲವು ಪಂಥಗಳಲ್ಲಿ ವಿಸ್ತರಿಸಿ, ಸಾಮಾಜಿಕ ಪರಿವರ್ತನೆಗೆ ಹೊಸ ಆಯಾಮ ನೀಡಿತು. ಶರಣರ ಚಳುವಳಿಯ ನಂತರ ದೊಡ್ಡ ಮಟ್ಟದಲ್ಲಿ ರೂಪುಗೊಂಡ ಸಾಮಾಜಿಕ ಚಳುವಳಿಯೇ ಬಂಡಾಯ ಸಾಹಿತ್ಯ ಸಂಘಟನೆ. ಇದು ಕೇವಲ ಸಾಹಿತ್ಯ ಚಳುವಳಿ ಮಾತ್ರವಲ್ಲ, ಒಂದು ಮನೋಧರ್ಮವಾಗಿ ಬೆಳೆದದ್ದು ಎಂದು ಹೇಳಿದರು.ಕಾರ್ಯಕ್ರಮವನ್ನು ಪ್ರಾಂಶುಪಾಲ ಡಾ. ವೆಂಕಟನಾರಾಯಣ ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಕನ್ನಡ ವಿಭಾಗದ ಮುಖ್ಯಸ್ಥ ಆಂಜನೇಯ ರಾಮತ್ನಾಳ ವಹಿಸಿದ್ದರು. ಡಾ. ಮಹಾದೇವಪ್ಪ ನಾಗರಾಳ ಹಾಗೂ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಸರಿತಾ ಇಂಚೂರ ಕಾರ್ಯಕ್ರಮದ ಕುರಿತು ಮಾತನಾಡಿದರು.ಈ ಸಂದರ್ಭದಲ್ಲಿ ಇಂಗ್ಲೀಷ್ ವಿಭಾಗದ ಮುಖ್ಯಸ್ಥ ಮಹೇಶ ಕುಮಾರ, ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಸಂಗನಗೌಡ ಶಿವನಗೌಡ, ಗಣಕಯಂತ್ರ ವಿಭಾಗದ ಮುಖ್ಯಸ್ಥ ಡಾ. ಸಯ್ಯದ್ ಆರೀಫ್ ಉಲ್ಲಾ, ಉಪನ್ಯಾಸಕರಾದ ಮೌನೇಶಗೌಡ, ಚಾಂದಪಾಷಾ ಹಾಗೂ ವಿದ್ಯಾರ್ಥಿಗಳಾದ ಉಮಾ, ಜಯಶ್ರೀ, ಪ್ರವೀಣ, ಪ್ರಭಾವತಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE